ಬಲಹೀನನಾಗಿರದೆ, [1]ನಿಮ್ಮಲ್ಲಿ ಬಲವಾಗಿರುವ ಕ್ರಿಸ್ತನು ನನ್ನಲ್ಲಿ ಮಾತಾಡುತ್ತಾನೆಂಬದರ ಪರೀಕ್ಷೆಯನ್ನು
೪ ಹುಡುಕುತ್ತೀರಲ್ಲ? ಹ್ಯಾಗಂದರೆ ಅವನು ಬಲಹೀನತ್ವದಿಂದ ಶಿಲುಬೆಗೆ ಹಾಕಲ್ಪಟ್ಟಾಗ್ಯೂ, ದೇವರ ಬಲ
ದಿಂದ ಬದುಕುತ್ತಾನೆ. ಹಾಗೆ ನಾವೂ ಅವನಲ್ಲಿ ಬಲಹೀನರಾಗಿದ್ದರೂ, ದೇವರ ಬಲದಿಂದ ಅವನ ಸಂಗಡ
ನಿಮಗಾಗಿ ಬದುಕುವೆವು.
೫ ವಿಶ್ವಾಸದಲ್ಲಿದ್ದೀರೇನೋ, ನಿಮ್ಮನ್ನು [2]ಶೋಧಿಸಿ ಕೊಳ್ಳಿರಿ; ನಿಮ್ಮನ್ನು ಪರೀಕ್ಷಿಸಿ ಕೊಳ್ಳಿರಿ. ನೀವು ಆಗದವ
೬ ರಲ್ಲದಿದ್ದರೆ, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂದು, ನಿಮ್ಮನ್ನು ನೀವೇ ತಿಳುಕೊಳ್ಳುವದಿಲ್ಲವೋ? ಆದರೆ
೭ ನಾವು ಆಗದವರಲ್ಲವೆಂದು, ನೀವು ತಿಳುಕೊಳ್ಳುವಿರೆಂಬದಾಗಿ ನಂಬುತ್ತೇನೆ. ಆದರೆ ನಾವು ಪರೀಕ್ಷಿತರೆಂದು
ಕಾಣುವದಕ್ಕಲ್ಲ, ನಾವು ಆಗದವರಂತೆ ಇದ್ದರೂ, ನೀವೇ ಒಳ್ಳೇದನ್ನು ಮಾಡುವದಕ್ಕೆ ನೀವು [3]ಕೆಟ್ಟದ್ದೇನೂ
೮ ಮಾಡದ ಹಾಗೆ, ದೇವರನ್ನು ಬೇಡುತ್ತೇನೆ. ಯಾಕಂದರೆ ಸತ್ಯಕ್ಕೆ ವಿರೋಧವಾಗಿ ಅಲ್ಲ, ಸತ್ಯಕ್ಕೋಸ್ಕರ
೯ ವೇ ಏನಾದರೂ ಮಾಡ ಬಲ್ಲೆವು. ನಾವು ಬಲಹೀನರಾಗಿಯೂ, ನೀವು ಬಲವುಳ್ಳವರಾಗಿಯೂ, ಇರು
ವಾಗ, ಸಂತೋಷ ಪಡುತ್ತೇವೆ. ಇದಲ್ಲದೆ ನೀವು ಸಂಪೂರ್ಣರಾಗ ಬೇಕೆಂಬುವದನ್ನೇ ಬೇಡುತ್ತೇವೆ.
೧೦ ಕೆಡವಿ ಹಾಕುವದಕ್ಕಲ್ಲ, ಕಟ್ಟುವದಕ್ಕೆ ದೇವರು ನನಗೆ ಕೊಟ್ಟ ಅಧಿಕಾರದ ಪ್ರಕಾರ, ನಾನು ಸಮೀಪದಲ್ಲಿ
ದ್ದು ಕಠಿಣವಾಗಿ ನಡಿಸದ ಹಾಗೆ, ದೂರದಲ್ಲಿದ್ದು ಇವುಗಳನ್ನು ಬರೆಯುತ್ತೇನೆ.
೧೧ ಕಡೆಯಲ್ಲಿ, ಸಹೋದರರೇ, [4]ಸಂತೋಷ ಪಡಿರಿ; ಸಂಪೂರ್ಣರಾಗಿರಿ; ಆದರಣೆ ಪಡಿರಿ; ಒಂದೇ ಮನಸ್ಸಾಗಿ
೧೨ ರ್‍ರಿ; ಸಮಾಧಾನವಾಗಿರ್‍ರಿ; ಆಗ ಪ್ರೀತಿ ಸಮಾಧಾನಗಳ ದೇವರು ನಿಮ್ಮ ಸಂಗಡ ಇರುವನು. ಒಬ್ಬರನ್ನೊ
೧೩ ಬ್ಬರು ಪರಿಶುದ್ಧ ಮುದ್ದಿನಿಂದ ವಂದಿಸಿರಿ. ಪರಿಶುದ್ಧರೆಲ್ಲರು ನಿಮ್ಮನ್ನು ವಂದಿಸುತ್ತಾರೆ.
೧೪ ಕರ್ತನಾದ [5]ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮದ ಅನ್ಯೋನ್ಯವೂ, ನಿಮ್ಮೆ
ಲ್ಲರ ಸಂಗಡ ಇರಲಿ. ಆಮೆನ್.

---

1. ಅಪರಾಧಿಗಳನ್ನು ದಂಡಿಸುವದರಿಂದ ಪೌಲನು ತಾನು ಕ್ರಿಸ್ತನ ಸಂಗಡ ಸಮ್ಮಂಧ ಪಟ್ಟವನೆಂದು ಪ್ರತ್ಯಕ್ಷವಾಗಿ ತೋರಬಂತು. ಕ್ರಿಸ್ತನು ಬಲಹೀನನಾಗಿ ಶಿಲುಬೆಯ ಮೇಲೆ ಪ್ರಾಣ ಬಿಟ್ಟಾಗ್ಯೂ, ಮಹಾ ಬಲವುಳ್ಳವನಾಗಿ ಎದ್ದನು. ಆತನಿಂದ ಜೀವವನ್ನೂ ಬಲವನ್ನೂ ಹೊಂದಿದ ಪೌಲನು ಸಭೆಯನ್ನು ತಿದ್ದುಪಾಟು ಮಾಡುವದರಲ್ಲಿ ಈ ಅಧಿಕಾರವನ್ನು ಸಲ್ಲಿಸುವವನಾಗಿದ್ದನು.

2. ನಾನು ಅಪೊಸ್ತಲ ಅಧಿಕಾರ ಹೊಂದಿದವನೋ ಎಂದು ನನ್ನನ್ನು ಶೋಧಿಸಿ ತಿಳುಕೊಳ್ಳ ಮನಸ್ಸಾಗಿರುವ ನೀವು (೩. ವ.) ವಿಶ್ವಾಸಭಕ್ತಿಗಳಿಂದ ಕ್ರಿಸ್ತನ ಸಮ್ಮಂಧಿಕರಾಗಿದ್ದೀರೋ? ಎಂದು ಮೊದಲು ನಿಮ್ಮನ್ನು ಶೋಧಿಸಿ ತಿಳುಕೊಳ್ಳಿರಿ. ಹೀಗೆ ಶೋಧಿಸುವದರಿಂದ ನೀವು ಆತನ ಉತ್ತಮ ಶಿಷ್ಯರೆಂಬು ನಿಶ್ಚಯವಾಗಿ ತೋರಿದರೆ, ನಾನು ಅಪೊಸ್ತಲ ಅಧಿಕಾರ ಹೊಂದಿದ ಆತನ ಉತ್ತಮ ದಾಸನೆಂದು ತಿಳಿದು ಕೊಳ್ಳ ಬಹುದು, ಅನ್ನುತ್ತಾನೆ.

3. ಕೆಟ್ಟದ್ದು ಮಾಡಿದವರನ್ನು ದಂಡಿಸುವದರಿಂದ ಅವನು ತನಗುಂಟಾಗಿರುವ ಅಪೊಸ್ತಲ ಅಧಿಕಾರವನ್ನು ತೋರಿಸುವದಕ್ಕಿಂತ, ಅವರು ಮೇಲು ಹೊಂದ ತಕ್ಕ ವಿಷಯದಲ್ಲಿ ಆ ಅಧಿಕಾರವನ್ನು ರುಜು ಪಡಿಸ ಶಕ್ತಿ ಇಲ್ಲದವನಂತೆ ಇರ ಅಪೇಕ್ಷಿಸುತ್ತಾನೆ. ಭಕ್ತಿ ವಿಷಯದಲ್ಲಿ ಅವರು ಸ್ಥಿರ ಉಳ್ಳವರಾಗಿದ್ದರೆ, ತಾನು ಬಲಹೀನನ ಹಾಗೆ ಕಾಣಲ್ಪಟ್ಟರೂ ದೊಡ್ಡದಲ್ಲ, ಅನ್ನುತ್ತಾನೆ. ಅವರು ಸಂಪೂರ್ಣರಾಗ ಬೇಕೆಂಬುವದೇ ಅವನ ಖಂಡಿತವಾದ ಕಟ್ಟಳೆಗಳ ಮುಖ್ಯ ಗುರಿಯಾಗಿತ್ತು.

4. ಕಲಹಗುಣವೂ ವಾಗ್ವಾದವೂ ಉಳ್ಳ ಕೊರಿಂಥದ ಸಭೆಯವರಿಗೆ ಈ ವಚನಗಳಲ್ಲಿರುವ ಬುದ್ಧಿಯು ಬಹು ತಕ್ಕದ್ದಾಗಿರುವದು.

5. ಯೆಹೂದ್ಯ ಸಭೆಗೆ ತ್ರಿವಿಧ ಆಶೀರ್ವಾದವು ಹೇಳಲ್ಪಟ್ಟ ಪ್ರಕಾರ (ಅಂಕೆ. ೬. ೨೪—೨೬.) ಕ್ರೈಸ್ತಸಭೆಗೂ ತ್ರಯೇಕ ದೇವರ ಶ್ರೇಷ್ಠ ಆಶೀರ್ವಾದವು ಹೇಳಲ್ಪಟ್ಟಿತು. ಈ ಆಶೀರ್ವಾದವು ಸದ್ವಿಶ್ವಾಸದಿಂದ ಆತನ ಸಂಗಡ ಐಕ್ಯವಾಗಿರುವ ಭಕ್ತರಿಗೂ ಸಭೆಗಳಿಗೂ ಸಂಪೂರ್ಣವಾಗಿ ಉಂಟಾಗುತ್ತದೆ. ಮತ್ತೊಬ್ಬರಿಗೆ ಇದರಲ್ಲಿ ಭಾಗವೇನೂ ಇರದು.

# THE EPISTLE OF PAUL THE APOSTLE TO THE GALATIANS.

## ಅಪೊಸ್ತಲನಾದ ಪೌಲನು ಗಲಾತ್ಯರಿಗೆ ಬರೆದ ಪತ್ರಿಕೆಯ ಪೀಠಿಕೆ.

ಗಲಾತ್ಯ ನಾಡು ಚಿಕ್ಕ ಆಸ್ಯದ ಮಧ್ಯದಲ್ಲಿತ್ತು. ಕ್ರಿಸ್ತನಿಗೆ ಮುಂಚೆ ೨೮೦ನೇ ವರುಷದಲ್ಲಿ ಫ್ರಾನ್ಸ್ ದೇಶದಲ್ಲಿ ಇದ್ದ ಗಾಲರು ಎಂದು ಕರೆಯಲ್ಪಟ್ಟ ಜನರು ಆ ನಾಡನ್ನು ಹಿಡಿದುಕೊಂಡು ಅದರಲ್ಲಿ ಒಕ್ಕಲಿದ್ದದರಿಂದ, ಆ ನಾಡಿಗೆ ಗಲಾತ್ಯ ಎಂದು ಹೆಸರಾಯಿತು. ಗ್ರೇಕ ದೇಶದಿಂದಲೂ ಅನೇಕ ಜನರು ಅಲ್ಲಿಗೆ ಹೋಗಿ ಒಕ್ಕಲಿದ್ದರು. ಯೆಹೂದ್ಯರಲ್ಲಿಯೂ ಅನೇಕರು ವ್ಯಾಪಾರದ ನಿಮಿತ್ತ ಅಲ್ಲಿಗೆ ಹೋಗಿ ಒಕ್ಕಲಿದ್ದರು. ಕ್ರಿಸ್ತನಿಗೆ ಮುಂಚೆ ೧೮೯ನೇ ವರುಷದಲ್ಲಿ ಅದು ರೋಮಾಯರ ಧೊರೆತನಕ್ಕೆ ಒಳಪಟ್ಟು, ೨೬ನೇ ವರುಷದಲ್ಲಿ ಪೂರ್ಣವಾಗಿ ಅವರ ಸ್ವಾಧೀನವಾಯಿತು.

ಅಪೊಸ್ತಲನಾದ ಪೌಲನು ಸುವಾರ್ತೆ ಪ್ರಸಂಗಿಸುವದಕ್ಕಾಗಿ ಲುಕವೋನ್ಯ ದೇಶದ ಸುತ್ತಲಿನ ಶೀಮೆಗಳಿಗೆ ಹೋದ ಸಮಯದಲ್ಲಿ ಗಲಾತ್ಯ ನಾಡಿಗೂ ಹೋಗಿರ ಬಹುದು. (ಅಪೊ. ಕ್ರಿ. ೧೪. ೬, ೭.) ಅವನು ಎರಡನೇ ಸಾರಿ ಪ್ರಯಾಣ ಮಾಡಿದಾಗ ಸೀಲನ ಸಂಗಡ ಅಲ್ಲಿಗೆ ಹೋದದ್ದು ನಿಶ್ಚಯ. (ಅಪೊ. ಕ್ರಿ. ೧೬. ೬.) ಇದಕ್ಕೆ ಮುಂಚೆ ಅವನು ಅಲ್ಲಿ ಸಭೆಗಳನ್ನು ಸ್ಥಾಪಿಸದೆ ಇದ್ದಾಗ್ಯೂ, ಈ ಸಾರಿ ಅವುಗಳನ್ನು ಸ್ಥಾಪಿಸಿರುವನೆಂಬುವದಕ್ಕೆ ಸಂಶಯವಿಲ್ಲ. ಮೂರು ವರುಷಗಳ ತರುವಾಯ ಆ ಸಭೆಗಳನ್ನು ನೋಡುವದಕ್ಕೆ ಹೋದನು. (ಅಪೊ. ಕ್ರಿ. ೧೮. ೨೩.)

ಈ ಸಭೆಗಳಿಗೆ ಶೇರಿದವರಲ್ಲಿ ಕೆಲವು ಮಂದಿ ಯೆಹೂದ್ಯರೂ, ಬಹು ಮಂದಿ ಜನಾಂಗಗಳವರೂ ಇದ್ದರು. (ಗಲಾ. ೪. ೮.) ಜನಾಂಗಗಳವರಾದ ಕ್ರೈಸ್ತರು ಹಳೇ ಒಡಂಬಡಿಕೆಯ ಗ್ರಂಥಗಳನ್ನು ಚನ್ನಾಗಿ ಕಲಿತವರಾಗಿದ್ದರೆಂದು ತೋರುತ್ತದೆ. (೪. ೨೧—೩೧.) ಅವರು ಕ್ರಿಸ್ತನ ಮಾರ್ಗವನ್ನು ಸಂತೋಷವಾಗಿ ಅಂಗೀಕರಿಸಿದರು. ಮತ್ತು ಅದನ್ನು ಪ್ರಸಂಗಿಸಿದ ಪೌಲನ ಮೇಲೆ ಬಹು ಪಕ್ಷವುಳ್ಳವರಾಗಿದ್ದರು. (೪. ೧೪, ೧೫; ೫. ೭.) ಕೆಲವು ದಿವಸಗಳ ತರುವಾಯ ಯೆಹೂದ್ಯ ಬೋಧಕರು ಅಲ್ಲಿಗೆ ಹೋದರು. ಆ ಕಾಲದಲ್ಲಿ ಪೌಲನಿಗೆ ಕೊರಿಂಥ ಪಟ್ಟದಲ್ಲಿ ಬಹಳ ಎಡತಡೆಯಾಗಿದ್ದ ಯೆರೂಸಲೇಮಿನ ಕಕ್ಷಿಗಾರರೇ ಹೀಗೆ ಗಲಾತ್ಯ ಶೀಮೆಗೆ ಹೋಗಿರುವರೆಂದು ತೋರುತ್ತದೆ. (ಅಪೊ. ಕ್ರಿ. ೧೫. ೧, ೨.) ಈ ಕಳ್ಳ ಬೋಧಕರು ಗಲಾತ್ಯ ಸಭೆಗಳಲ್ಲಿ ಒಳನುಗ್ಗಿ, ರಕ್ಷಣೆಯ ವಿಷಯದಲ್ಲಿ ಜನಾಂಗಗಳವರಾದ ಕ್ರೈಸ್ತರು ಪರಿಛೇದನೆ ಹೊಂದಿ ಮೋಶೆಯ ನ್ಯಾಯಪ್ರಮಾಣವನ್ನು ಅವಶ್ಯವಾಗಿ ಕೈಕೊಳ್ಳ ಬೇಕೆಂದು ಬೋಧಿಸಿದರು. ಮತ್ತು ಪೌಲನು, ಪೇತ್ರನು ಮುಂತಾದ ಹನ್ನೆರಡು ಮಂದಿ ಅಪೊಸ್ತಲರಿಗೆ ಕಡಿಮೆಯಾದವನೆಂದೂ, (೧, ೨. ಸಂಧಿ.) ಯೆಹೂದ್ಯರ ಅಭಿಮಾನವನ್ನಪೇಕ್ಷಿಸಿ, ನ್ಯಾಯಪ್ರಮಾಣವನ್ನು ಅನುಸರಿಸಿದಂಥ ಅವನು, ಜನಾಂಗಗಳವರು ಅದನ್ನು ಅನುಸರಿಸುವದು ಅವಶ್ಯವಲ್ಲವೆಂದು ಬೋಧಿಸಿದ್ದರಿಂದ ಅವನು ಯಥಾರ್ಥವಂತನಲ್ಲವೆಂದೂ ಹೇಳಿದರು. (೫. ೧೧.)

ಅವರು ಇಂಥ ಬೋಧನೆಯಿಂದ ಸಭೆಯಲ್ಲಿ ಭೇದವನ್ನುಂಟು ಮಾಡಿ, (೫. ೧೫.) ಅನೇಕರು ಸತ್ಯಮಾರ್ಗವನ್ನು ಬಿಟ್ಟು ತಪ್ಪು ದಾರಿಯಲ್ಲಿ ನಡಿಯುವಂತೆ ಮಾಡಿದರು. (೧. ೬; ೩. ೧; ೪. ೯.) ಹೀಗೆ ಮಾರ್ಗ ತಪ್ಪಿದವರು ಸುವಾರ್ತೆಯ ಸತ್ಯಗಳನ್ನು ಮುಂಚೆ ಭಕ್ತಿವೈರಾಗ್ಯದಿಂದ ಅಂಗೀಕರಿಸಿದ ಪ್ರಕಾರವೇ, ಕಳ್ಳ ಬೋಧಕರ ಸುಳ್ಳು ಉಪದೇಶಗಳನ್ನು ಸಹ ಅಂಗೀಕರಿಸಿದರು.

ಈ ಉಪದೇಶಗಳೆಲ್ಲಾ ಸತ್ಯವಲ್ಲವೆಂದು ಪೌಲನು ಅವರಿಗೆ ಮುಖಾಮುಖಿಯಾಗಿ ಹೇಳಿ ಇದ್ದನು. (೧. ೯; ೪. ೧೬.) ಆದಾಗ್ಯೂ ಆ ಸುಳ್ಳು ಬೋಧನೆಗಳು ಬರಬರ ಹೆಚ್ಚಾದದರಿಂದ ಅವುಗಳನ್ನು ಖಂಡಿಸುವದಕ್ಕೆ ೫೭ನೇ ವರುಷದಲ್ಲಿ ಪೌಲನು ಈ ಪತ್ರಿಕೆಯನ್ನು ಕೊರಿಂಥ ಪಟ್ಣದಿಂದಲಾದರೂ, (ಅಪೊ. ಕ್ರಿ. ೧೮. ೧—೩; ೨೦. ೧—೩.) ಎಫೆಸ ಪಟ್ಣದಿಂದಲಾದರೂ, (ಅಪೊ. ಕ್ರಿ. ೧೯. ೧೦.) ಬರೆದಿರುವನೆಂದು ತೋರುತ್ತದೆ. ಈ ಪತ್ರಿಕೆಯ ಆರಂಭದಲ್ಲಿರುವ ಖಂಡಿತವಾದ ಮಾತುಗಳನ್ನೂ, ಈ ಪತ್ರಿಕೆಯಲ್ಲಿ ಹೇಳಿರುವ ನ್ಯಾಯಗಳನ್ನೂ ಕುರಿತು ಯೋಚಿಸುವಾಗ, ಆಗ ಸಭೆಗೆ ಸಂಭವಿಸಿದ್ದ ಅಪಾಯವು ದೊಡ್ಡದೆಂದು ತೋರುತ್ತದೆ. ಈ ಪತ್ರಿಕೆಯ ಮುಖ್ಯ ತಾತ್ಪರ್ಯವು, ಯೆಹೂದ್ಯ ಬೋಧಕರ ಉಪದೇಶಗಳು ಕ್ರಿಸ್ತನ ಮಾರ್ಗದ ಸ್ವಭಾವವನ್ನೂ ಶ್ರೇಷ್ಠತ್ವವನ್ನೂ ಕೆಡಿಸ ತಕ್ಕವುಗಳೆಂದು ನಿರೂಪಿಸುವದೇ. ತನ್ನನ್ನು ಕುರಿತೂ, ತನ್ನ ಅಪೊಸ್ತಲ ಅಧಿಕಾರವನ್ನು ಕುರಿತೂ ಶತ್ರುಗಳು ಕಲಿಸಿದ ಉಪದೇಶಗಳೆಲ್ಲಾ ಸತ್ಯವಲ್ಲವೆಂದು ಪೌಲನು ಮೊದಲು ತೋರಿಸಿ, ತರುವಾಯ ತನ್ನ ಅಭಿಪ್ರಾಯವನ್ನು ತಿಳಿಯ ಮಾಡುತ್ತಾನೆ.

ರೋಮಾಯರ ಪತ್ರಿಕೆಯ ಹಾಗೆಯೇ ಈ ಪತ್ರಿಕೆಯಲ್ಲಿಯೂ, ಪಾಪಿಷ್ಠರಾದ ಮನುಷ್ಯರು ನೀತಿವಂತರಾಗುವ ಮುಖ್ಯ ವಿಷಯವನ್ನು ಕುರಿತು ಹೇಳಿ ಇದೆ. ರೋಮಾಯರ ಪತ್ರಿಕೆಯಲ್ಲಿ ಇದನ್ನೇ ಮುಖ್ಯ ವಿಷಯವಾಗಿಯೂ, ಈ ಪತ್ರಿಕೆಯಲ್ಲಿ ಇದನ್ನು ಯೆಹೂದ್ಯ ಬೋಧಕರ ಸಂಗಡ ಮಾಡುವ ತರ್ಕ ಸಮ್ಮಂಧವಾಗಿಯೂ ತೋರಿಸಿ ಇದೆ.

ಸ್ವಂತ ಪುಣ್ಯದಿಂದ ಸುಖ ಹೊಂದ ಬಹುದೆಂದು ಹೇಳುವ ಜನಾಂಗಗಳ ಸಂಗಡಲಾದರೂ, ಕ್ರಿಸ್ತನ ಮಾರ್ಗವನ್ನು ತಳ್ಳಿ ಬಿಟ್ಟು, ಮೋಶೆಯ ನ್ಯಾಯಪ್ರಮಾಣವನ್ನು ಕೈಕೊಳ್ಳುವದರಿಂದ ಮೋಕ್ಷಾನಂದವನ್ನು ಹೊಂದ ಬಹುದೆಂದು ಸಾಧಿಸಿದ ಯೆಹೂದ್ಯರ ಸಂಗಡಲಾದರೂ ಪೌಲನು ತರ್ಕ ಮಾಡದೆ, ಕ್ರಿಸ್ತನ ಮಾರ್ಗವನ್ನು ಅನುಸರಿಸಿದ್ದು ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದ ಮಾತ್ರವಲ್ಲ, ಮೋಶೆಯ ಆಚರಣೆಗಳನ್ನು ಅನುಸರಿಸುವದರಿಂದಲೂ ಪರಮ ಗತಿ ಹೊಂದ ಬಹುದೆಂದು ಹೇಳಿದ ಕಕ್ಷಿಗಾರರ ಸಂಗಡಲೇ ವಾದಿಸಿದನು. ನ್ಯಾಯಪ್ರಮಾಣವು ಕೊಡಲ್ಪಟ್ಟ ಗುರಿ ಇದಲ್ಲವೆಂದೂ, ಅದು ಕ್ರಿಸ್ತನ ಪುಣ್ಯಮರಣದಿಂದ ಈಡೇರಿ ತೀರಿತೆಂದೂ, ಅದರಿಂದ ದೇವರ ಕೃಪೆ ಹೊಂದ ಬಹುದೆಂದು ನೆನಸುವವರು ದೇವರು ಏರ್ಪಡಿಸಿದ ಒಂದೇ ರಕ್ಷಣೆಯ ಮಾರ್ಗವನ್ನು ಅಲಕ್ಷ್ಯ ಮಾಡಿ ತಳ್ಳುವವರಾಗಿದ್ದಾರೆಂದೂ, ಪೌಲನು ನ್ಯಾಯಧೋರಣೆಯಿಂದ ಹೇಳಿ ತೋರಿಸುತ್ತಾನೆ.

ರಕ್ಷಕನಾದ ಕ್ರಿಸ್ತನನ್ನು ನಂಬಿ ಕೊಳ್ಳುವದರಿಂದಲೇ ಪರಲೋಕದ ಮನೆಗೆ ಸೇರುವೆವೆಂದು ನಿಶ್ಚಯವಾಗಿದ್ದಾಗ್ಯೂ, ಮೋಶೆಯ ನ್ಯಾಯಪ್ರಮಾಣ ಈಡೇರಿ ಆಯಿತೋ ಇಲ್ಲವೋ ಎಂಬ ಸಂಶಯವುಳ್ಳವರಾಗಿದ್ದ ಬಲಹೀನ ವಿಶ್ವಾಸಿಗಳನ್ನು, ಭಕ್ತಿಯಲ್ಲಿ ಸೇರಿದ ಉತ್ತಮರು ತಪ್ಪುಳ್ಳವರೆಂದು ಎಣಿಸದೆ ಅಂಗೀಕರಿಸ ಬೇಕೆಂದು ಪೌಲನು ರೋಮಾಯರ ಪತ್ರಿಕೆ ೧೪, ೧೫ನೇ ಸಂಧಿಗಳಲ್ಲಿ ಹೇಳಿ ಇದ್ದಾಗ್ಯೂ, ಕ್ರಿಸ್ತನ ಮಾರ್ಗವನ್ನು ಅನುಸರಿಸಿ ಇದ್ದು, ಅದರ ಸಾರವನ್ನೂ ಸತ್ಯವನ್ನೂ ಗ್ರಹಿಸದೆ, ಅದನ್ನು ಪೂರ್ಣವಾಗಿ ಕೆಡಿಸ ತಕ್ಕ ಅಸತ್ಯವನ್ನು ಬೋಧಿಸಿದವರಿಗೆ ಅವನು ಸ್ವಲ್ಪವಾದರೂ ಸ್ಥಳ ಕೊಡಲಿಲ್ಲ.

ಈ ಪತ್ರಿಕೆ ಮೂರು ಭಾಗಗಳಾಗಿದೆ:

ಮೊದಲನೇ ಎರಡು ಭಾಗಗಳು ತರ್ಕದ ಪ್ರಕಾರವಾಗಿಯೂ, ಕಡೇ ಭಾಗವು ಬುದ್ಧಿ ಬೋಧನೆಗಳನ್ನು ಕಲಿಸುವ ರೀತಿಯಾಗಿಯೂ ಇರುತ್ತದೆ.

I. ಪೌಲನು ತಾನು ದೈವಯತ್ನದಿಂದ ಅಪೊಸ್ತಲ ಉದ್ಯೋಗವನ್ನೂ ಅಧಿಕಾರವನ್ನೂ ಹೊಂದಿದವನೆಂದು ತೋರಿಸಿ ಇದೆ. (೧, ೨. ಸಂಧಿ.)

II. ನ್ಯಾಯಪ್ರಮಾಣದ ಕ್ರಿಯೆಗಳಿಂದ ಅಲ್ಲ, ರಕ್ಷಕನಾದ ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದಲೇ ನೀತಿವಂತರಾಗುತ್ತೇವೆ ಎಂದು ನಿರೂಪಿಸಿ ಇದೆ. (೩, ೪. ಸಂಧಿ.)

III. ಅಂತ್ಯೋಕ್ತಿಯಲ್ಲಿ ಬುದ್ಧಿಬೋಧನೆಗಳೂ, ಎಚ್ಚರಿಕೆಗಳೂ ಕಟ್ಟಳೆಗಳೂ ಅಡಗಿ ಇವೆ. (೫, ೬. ಸಂಧಿ.)

# THE EPISTLE OF PAUL THE APOSTLE TO THE GALATIANS.

## ಅಪೊಸ್ತಲನಾದ ಪೌಲನು

# ಗಲಾತ್ಯರಿಗೆ ಬರೆದ ಪತ್ರಿಕೆ.

ಪೀಠಿಕೆ; ಆಶೀರ್ವಾದ.

1. [1]ಮನುಷ್ಯರಿಂದಲ್ಲ, [2]ಮನುಷ್ಯನ ಮುಖಾಂತರವಲ್ಲ, ಯೇಸು ಕ್ರಿಸ್ತನಿಂದಲೂ, ಅವನನ್ನು [3]ಸತ್ತವರೊ
೨ ಳಗಿಂದ ಎಬ್ಬಿಸಿದ ತಂದೆಯಾದ ದೇವರಿಂದಲೂ, ಅಪೊಸ್ತಲನಾದ ಪೌಲನೂ, ನನ್ನ ಸಂಗಡ ಇರುವ [4]ಸಹೋ
೩ ದರರೆಲ್ಲರೂ ಗಲಾತ್ಯದ ಸಭೆಗಳಿಗೆ— ತಂದೆಯಾದ ದೇವರಿಂದಲೂ, ನಮ್ಮ ಕರ್ತನಾದ ಯೇಸು ಕ್ರಿಸ್ತನಿಂ
೪ ದಲೂ, ನಿಮಗೆ [5]ಕೃಪೆಯೂ ಸಮಾಧಾನವೂ ಆಗಲಿ. ಅವನು ಈಗಲಿರುವ [6]ದುಷ್ಟ ಯುಗದೊಳಗಿಂದ
ನಮ್ಮನ್ನು ಬಿಡಿಸುವದಕ್ಕೆ, ದೇವರೂ ನಮ್ಮ ತಂದೆಯೂ ಆಗಿರುವವನ ಚಿತ್ತದ ಪ್ರಕಾರ, ನಮ್ಮ ಪಾಪಗಳಿ
೫ ಗೋಸ್ಕರ [7]ತನ್ನನ್ನು ಕೊಟ್ಟನು; ಅವನಿಗೆ ಎಂದೆಂದಿಗೂ [8]ಮಹಿಮೆ ಆಗಲಿ. ಆಮೆನ್.

1. ಈ ಪೀಠಿಕೆಯಲ್ಲಿ ಪೌಲನ ಅಪೊಸ್ತಲ ಅಧಿಕಾರವೂ, (೧. ೧, ೨.) ಸಭೆಗಳಿಗೆ ಆಶೀರ್ವಾದವೂ, (೩—೫. ವ.) ಹೇಳಲ್ಪಟ್ಟದೆ.

2. ಪೌಲನು ತಾನು ಹೊಂದಿದ ಅಪೊಸ್ತಲ ಅಧಿಕಾರವು ಮನುಷ್ಯರಿಂದಲ್ಲ, ಅಂದರೆ, ಆ ಅಧಿಕಾರಕ್ಕೆ ಮನುಷ್ಯರು ಕರ್ತರಲ್ಲವೆಂಬುವ ಅರ್ಥವಾಗುತ್ತದೆ. ಮನುಷ್ಯನ ಮುಖಾಂತರವಲ್ಲ, ಅಂದರೆ, ದೇವರು ಬೇರೊಬ್ಬರ ಮೂಲಕವಾಗಿ ಆ ಅಧಿಕಾರ ಕೊಡಲಿಲ್ಲವೆಂಬುವ ತಾತ್ಪರ್ಯ ಉಂಟು. ಪೌಲನು ಅಪೊಸ್ತಲ ಅಧಿಕಾರವನ್ನು ಮನುಷ್ಯರಿಂದ ಹೊಂದಿದನೆಂದು ಶತ್ರುಗಳು ಹೇಳಿದ ಆಕ್ಷೇಪಣೆಗೆ ಈ ಪ್ರಕಾರ ಸಮಾಧಾನ ಹೇಳಿ, ತರುವಾಯ ಕ್ರಿಸ್ತನಿಂದಲೂ ತಂದೆಯಾದ ದೇವರಿಂದಲೂ ತನಗೆ ಆ ಅಧಿಕಾರ ಬಂತೆಂದು ಸರಿಯಾದ ಕಾರಣವನ್ನು ಹೇಳುತ್ತಾನೆ. (೧೨. ವ. ಅಪೊ. ಕ್ರಿ. ೨೨. ೧೭—೨೧.)

3. ಕ್ರಿಸ್ತನು ಸತ್ತವರೊಳಗಿಂದ ಜೀವಿತನಾಗಿ ಎದ್ದ ಅತಿಶಯದ ಸಂಗತಿಯು ಅವನ ಬೋಧನೆಯ ಸತ್ಯವನ್ನು ಸ್ಥಾಪಿಸುವದಾಗಿಯೂ, ಅವನ ಅಪೊಸ್ತಲ ಅಧಿಕಾರವನ್ನೂ ವರಗಳನ್ನು ಕೊಡ ತಕ್ಕ ಅಧಿಕಾರವನ್ನೂ ದೃಢ ಪಡಿಸುವದಾಗಿಯೂ ಇರುತ್ತದೆ. (ಎಫೆ. ೪. ೮, ೧೧—೧೪.)

4. ಸಹೋದರರೆಲ್ಲರೂ ಎಂಬುವದು, ಪೌಲನ ಸಂಗಡ ಇದ್ದವರೂ, ದೇವರ ಸೇವೆ ಮಾಡಿದವರೂ ಆದ ಎಲ್ಲರನ್ನು ಕುರಿತು ಹೇಳಿ ಇದೆ. ಇವರು ಆಶೀರ್ವಾದ ಹೇಳಿದ ಗಲಾತ್ಯದ ಸಭೆಗಳು ಅಂದರೆ, ಗಲಾತ್ಯ ದೇಶದಲ್ಲಿರುವ ಮುಖ್ಯ ಪಟ್ಣಗಳಲ್ಲಿದ್ದ ಸಭೆಗಳು, ಎಂದು ತೋರುತ್ತದೆ. ಬೇರೆ ಪತ್ರಿಕೆಗಳಲ್ಲಿ ಸಭೆಗಳನ್ನು ಕುರಿತು ಮೆಚ್ಚಿಕೆಯಾಗಿಯೂ ಹೊಗಳಿಕೆಯಾಗಿಯೂ ಹೇಳಿರವಾಗಿ, ಈ ಸಭೆಗಳನ್ನು ಕುರಿತು ಮಾತ್ರ ಅಂಥಾ ಹೊಗಳಿಕೆ ಏನೂ ಹೇಳಲಿಲ್ಲ. ಈ ಸಭೆಗಳು ಸತ್ಯ ಮಾರ್ಗವನ್ನು ಬಿಟ್ಟು ತಪ್ಪಾಗಿ ನಡೆದ ಸಭೆಗಳಾದದರಿಂದ ಪೌಲನು ಅವುಗಳನ್ನು ಖಂಡಿಸಿದ್ದೇ ಹೊರ್ತು ಹೊಗಳಲಿಲ್ಲ.

5. (ರೋಮಾ. ೧. ೫. ವಚನದ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತ ಯೇಸುವಿನಲ್ಲಿ ತೋರಿದ ದೇವರ ಕೃಪೆಯ ಮಹಿಮೆಯು ಈ ಪತ್ರಿಕೆಯಲ್ಲಿ ಬಹಳ ವರ್ಣಿಸಿ ಹೇಳಲ್ಪಟ್ಟದೆ. (೪. ವ.) ಆ ಕೃಪೆಗೆ ದೇವರ ಪ್ರೀತಿಯೇ ಕಾರಣವು.

6. ಈ ಪ್ರಪಂಚದಲ್ಲಿ ದುಷ್ಟತ್ವವೂ ಪಾಪವೂ ತುಂಬಿ ಇರುವದರಿಂದ ಇದು ದುಷ್ಟ ಯುಗವೇ ಸರಿ. ಈ ಕೆಟ್ಟ ಪ್ರಪಂಚದಲ್ಲಿ ತುಂಬಿರುವ ಕೇಡುಗಳಿಗೂ ಕೆಟ್ಟವರಿಗೂ ಬರುವ ನಿತ್ಯ ದಂಡನೆಗೆ ಭಕ್ತರನ್ನು ತಪ್ಪಿಸಿ ಕಾಪಾಡುವದಕ್ಕಾಗಿ ಕ್ರಿಸ್ತನು ಮರಣ ಹೊಂದಿದನು. ಆದದರಿಂದ ಲೋಕದ ಸಂಗಡ ಅನ್ಯೋನ್ಯವಾಗಿರುವದೂ, ಕೆಟ್ಟವರ ಸಹವಾಸ ಮಾಡುವದೂ ದೊಡ್ಡ ಪಾಪವೆಂದು ಪ್ರತ್ಯಕ್ಷವಾಗಿ ತೋರುತ್ತದೆ. (೧ ಯೋಹಾ. ೫. ೧೯.)

7. ಕ್ರಿಸ್ತನು ನಮಗೋಸ್ಕರ ತನ್ನನ್ನು ತಾನೇ ಮರಣಕ್ಕೆ ಒಪ್ಪಿಸಿ ಕೊಟ್ಟನು. (ಮತ್ತಾ. ೨೦. ೨೮. ವಚನದ ವ್ಯಾಖ್ಯಾನ ನೋಡ ಬೇಕು.) ಪರಿಛೇದನೆಯಿಂದಲೂ ನ್ಯಾಯಪ್ರಮಾಣದ ಆಚಾರಕ್ರಮದಿಂದಲೂ ಪರಮ ಗತಿ ಹೊಂದ ಬಹುದೆಂದು ಬೋಧಿಸಿದ ಕಳ್ಳಗುರುಗಳಿಗೆ ವಿರೋಧವಾಗಿ ಪೌಲನು, ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ ಅರ್ಪಿಸಿದ ಪಾಪನಿವಾರಣ ಬಲಿಯನ್ನು ಈ ಪತ್ರಿಕೆಯ ಆರಂಭದಲ್ಲಿಯೇ ತೋರಿಸುತ್ತಾನೆ. ದೇವರ ಕೃಪೆಯಿಂದ ಪ್ರಾರಂಭವಾಗಿ ಸಂಪೂರ್ಣ ಮಾಡಲ್ಪಟ್ಟ ಈ ರಕ್ಷಣೆಯನ್ನು ಮನುಷ್ಯರ ಪುಣ್ಯದಿಂದ ಸಂಪಾದಿಸ ಬಹುದೆಂದು ನೆನಸುವದು ವ್ಯರ್ಥವಾಗಿದೆ.

8. ದಯಾನಿಧಿಯಾದ ದೇವರ ಈಡಿಲ್ಲದ ಕೃಪೆಯಿಂದ ಉಂಟಾದ ಮಹಾ ರಕ್ಷಣೆಗಾಗಿ ಆತನಿಗೆ ಯುಗಯುಗಾಂತರಗಳಿಗೂ ಮಹಿಮೆಯಾಗ ಬೇಕು. ಈ ದುಷ್ಟ ಯುಗದಿಂದ ರಕ್ಷಿಸಿದ ಒಳ್ಳೇ ಕರ್ತನನ್ನು ಎಂದೆಂದಿಗೂ ಸ್ತುತಿಸ ತಕ್ಕದ್ದು ನ್ಯಾಯವಾಗಿದೆ.

ಗಲಾತ್ಯರನ್ನು ಖಂಡಿಸಿ, ಕಳ್ಳಬೋಧಕರನ್ನು ಎಚ್ಚರಿಸಿದ್ದು.

೬ [1]ಕ್ರಿಸ್ತನ ಕೃಪೆಯಲ್ಲಿ ನಿಮ್ಮನ್ನು [2]ಕರೆದವನಿಂದ [3]ಬೇರೆ ಸುವಾರ್ತೆಗೆ [4]ಇಷ್ಟು ಬೇಗ ತಿರುಗಿ ಕೊಳ್ಳುತ್ತೀರೆಂ
೭ ದು, ಆಶ್ಚರ್ಯ ಪಡುತ್ತೇನೆ. ಅದು ಮತ್ತೊಂದೂ ಅಲ್ಲ, ನಿಮ್ಮನ್ನು ತೊಂದರೆ ಪಡಿಸಿ, ಕ್ರಿಸ್ತನ ಸುವಾರ್ತೆ
ಯನ್ನು ತಿರುಗಿಸಿ ಬಿಡ ಇಚ್ಛೈಸುವವರು ಕೆಲವರು ಇದ್ದಾರೆ, ಅಷ್ಟೆ.
೮ ಆದರೆ ನಾವಾದರೂ, ಆಕಾಶದಿಂದ ಬಂದ ದೂತನಾದರೂ, ನಾವು ನಿಮಗೆ ಪ್ರಸಂಗಿಸಿದ್ದೇ ಹೊರ್ತು,
೯ ಬೇರೆ ಸುವಾರ್ತೆ ನಿಮಗೆ ಪ್ರಸಂಗಿಸಿದರೆ, [5]ಶಾಪವಾಗಲಿ. ನಾವು [6]ಮುಂಚೆ ಹೇಳಿದ ಪ್ರಕಾರ, ಈಗಲು ತಿರಿಗಿ
ಹೇಳುತ್ತೇನೆ, ನೀವು ಹೊಂದಿದ್ದೇ ಹೊರ್ತು, ಒಬ್ಬನು ನಿಮಗೆ ಬೇರೆ ಸುವಾರ್ತೆ ಪ್ರಸಂಗಿಸಿದರೆ, ಶಾಪವಾಗಲಿ.
೧೦ ಯಾಕಂದರೆ [7]ಈಗ ಮನುಷ್ಯರನ್ನು ಸಮ್ಮತಿ ಪಡಿಸುತ್ತೇನೋ? ದೇವರನ್ನೋ? ಇಲ್ಲವೆ ಮನುಷ್ಯರನ್ನು
ಮೆಚ್ಚಿಸ ಹುಡುಕುತ್ತೇನೋ? ಇನ್ನು ಮನುಷ್ಯರನ್ನು ಮೆಚ್ಚಿಸಿದರೆ, ನಾನು ಕ್ರಿಸ್ತನ ದಾಸನಾಗಿರೆನು.

ದೇವರಿಂದ ಬೋಧನೆ ಹೊಂದಿದ ಪೌಲನು ಸ್ವಾಧೀನವಾದ ಅಧಿಕಾರ ಹೊಂದಿ ಜನಾಂಗಗಳಿಗೆ
ಪ್ರಸಂಗಿಸ ಏರ್ಪಡಿಸಲ್ಪಟ್ಟದ್ದು.

೧೧ ಆದರೆ ಸಹೋದರರೇ, ನನ್ನಿಂದ ಪ್ರಸಂಗಿಸಲ್ಪಟ್ಟ ಸುವಾರ್ತೆಯನ್ನು [8]ಮನುಷ್ಯನ ಪ್ರಕಾರವಲ್ಲದ್ದೆಂದು, ನಿಮ
೧೨ ಗೆ ತಿಳಿಸುತ್ತೇನೆ. ಯಾಕಂದರೆ ನಾನು ಮನುಷ್ಯನಿಂದ ಅದನ್ನು ಹೊಂದಲೂ ಬೋಧಿಸಲ್ಪಡಲೂ ಇಲ್ಲ;
ಯೇಸು ಕ್ರಿಸ್ತನ ಪ್ರಕಟಣೆಯಿಂದಲೇ.

1. ಪೌಲನು ಈ ಪತ್ರಿಕೆಯ ಪೀಠಿಕೆಯನ್ನು ಬಹಳ ಉದ್ದ ಮಾಡದೆ, ಗಲಾತ್ಯ ಸಭೆಯವರು ಕಳ್ಳಬೋಧಕರಿಗೆ ಸ್ಥಳ ಕೊಟ್ಟು, ಸತ್ಯಮಾರ್ಗ ತಪ್ಪಿ ನಡೆದ ಕಾರಣ ತನಗುಂಟಾದ ಆಶ್ಚರ್ಯವನ್ನೂ ದುಃಖವನ್ನೂ ತೋರಿಸಿ, ತಾನು ಕ್ರಿಸ್ತನಿಗೆ ಯಥಾರ್ಥವಾಗಿ ಸೇವೆ ಮಾಡಿದೆನೆಂದು ಹೇಳುತ್ತಾನೆ. (೬—೧೦. ವ.) ತಾನು ಸುವಾರ್ತೆಯ ಸತ್ಯಗಳನ್ನು ಮನುಷ್ಯರ ಬಳಿಯಲ್ಲಿ ಅಲ್ಲ, ನೆಟ್ಟಗೆ ದೇವರ ಬಳಿಯಲ್ಲಿಯೇ ಕಲಿತು ಕೊಂಡೆನೆಂದೂ, (೧೧, ೧೨. ವ.) ಫರಿಸಾಯರ ಮತಾಭಿಮಾನವನ್ನು ತಳ್ಳಿ, (೧೩, ೧೪. ವ.) ರಕ್ಷಕನಾದ ಕ್ರಿಸ್ತನನ್ನು ಹೊಂದಿ ಕೊಂಡಾಗ, ಬೇರೆ ಸಭೆಗಳಿಂದಲಾದರೂ ಅಪೊಸ್ತಲರಿಂದಲಾದರೂ ಬೋಧನೆ ಹೊಂದಲಿಲ್ಲವೆಂದೂ, (೧೫—೨೪. ವ.) ಹದಿನಾಲ್ಕು ವರುಷಗಳ ತರುವಾಯ ಯೆರೂಸಲೇಮಿಗೆ ಹೋದಾಗ, ಅಲ್ಲಿದ್ದ ಅಪೊಸ್ತಲರಿಂದ ಬೋಧನೆ ಹೊಂದುವದಕ್ಕಲ್ಲ, ಯೆಹೂದ್ಯರ ಆಚಾರಕರ್ಮಗಳಿಗೆ ಜನಾಂಗಗಳ ಕ್ರೈಸ್ತರು ತೊಲಗಿ ಇರುವದು ಒಳ್ಳೇದೆಂಬ ತರ್ಕವನ್ನು ತೀರಿಸುವದಕ್ಕಾಗಿ ಹೋದೆನೆಂದೂ, ಅಪೊಸ್ತಲರೆಲ್ಲರೂ ತನ್ನ ಸ್ವಾಧೀನ ಅಧಿಕಾರವನ್ನು ಒಪ್ಪಿ ಕೊಂಡರೆಂದೂ, (೨. ೧—೧೦.) ಅಂಥಾ ಅಧಿಕಾರದಿಂದ ಯೆಹೂದ್ಯರಿಗೆ ಅನುಸರಣೆಯಾಗಿ ನಡೆದ ಪೇತ್ರನನ್ನು ಖಂಡಿಸಿದೆನೆಂದೂ, ಕ್ರಿಸ್ತನ ರಕ್ಷಣೆಯನ್ನು ಅಂಗೀಕರಿಸಿದವರ ಸ್ವಾಧೀನವನ್ನು ನೆಲೆಗೊಳಿಸಿದೆನೆಂದೂ, ಚರಿತ್ರದೃಷ್ಟಾಂತದೊಡನೆ ಹೇಳುತ್ತಾನೆ. (೧೧—೨೧. ವ.)

2. ಆ ಕೃಪೆಯ ಸ್ಥಿತಿಯಲ್ಲಿ ನಿಲ್ಲುವೆವೆಂದು ತೀರ್ಮಾನ ಮಾಡಿದ ಅವರು ಅದನ್ನು ಬಿಟ್ಟು ಶೀಘ್ರವಾಗಿ ಜಾರಿ ಹೋದರು.

3. ಬೇರೆ ಸುವಾರ್ತೆ ಅಂದರೆ, ಕಳ್ಳಬೋಧಕರು ಕಪಟವಾಗಿ ಬೋಧಿಸುವ ಸುಳ್ಳು ಬೋಧನೆಯೇ. ದೇವರು ಅನುಗ್ರಹಿಸಿದ ಸುವಾರ್ತೆ ಒಂದೇ ಹೊರ್ತು ಎರಡಿಲ್ಲವೆಂದು ಹೇಳುತ್ತಾನೆ.

4. ಇಷ್ಟು ಬೇಗ ಎಂಬುವದು, ಅವರು ಗುಣ ಪಟ್ಟ ಕೂಡಲೇ, ಅಥವಾ ಪೌಲನು ಅವರನ್ನು ದರ್ಶಿಸಿ ಹೋದ ಕೂಡಲೇ, ಅಥವಾ ಕಳ್ಳಬೋಧಕರು ಅವರ ಬಳಿಗೆ ಬಂದ ಕೂಡಲೇ ಎಂದು ಅರ್ಥವಾಗುತ್ತದೆ. ಹ್ಯಾಗಾದರೂ ಒಂದು ವರುಷ ಮೊದಲ್ಗೊಂಡು ಐದು ವರುಷಗಳ ಕ್ಲುಪ್ತವಾದ ಕಾಲವನ್ನೇ ಸೂಚಿಸುತ್ತದೆ.

5. (೧ಕೊರಿ. ೧೬. ೨೨. ವಚನದ ವ್ಯಾಖ್ಯಾನ ನೋಡ ಬೇಕು.) ಯೇಸು ಕ್ರಿಸ್ತನು ಅನುಗ್ರಹಿಸಿದ ಸುವಾರ್ತೆಯ ಹೊರ್ತು, ಬೇರೊಂದು ಸುವಾರ್ತೆಯನ್ನು ಭೂಲೋಕದ ಮನುಷ್ಯರಾಗಲಿ, ಪರಲೋಕದ ದೂತರಾಗಲಿ ಪ್ರಸಂಗಿಸಿದರೆ, ಅವರಿಗೆ ದೇವರ ಶಾಪವು ಬರುವದೆಂದು ಎರಡಾವರ್ತಿ ದೃಢ ಪಡಿಸಿ ಹೇಳುತ್ತಾನೆ. (೧೦. ವ.)

6. ಮುಂಚೆ ಹೇಳಿದ ಪ್ರಕಾರ ಎಂಬುವದು ಮುಂಚಿನ ವಾಕ್ಯದಲ್ಲಿ ಹೇಳಿದ್ದನ್ನಾಗಲಿ, ಪೌಲನು ಅವರನ್ನು ಸಂಧಿಸಿದಾಗ ಕಳ್ಳಬೋಧಕರನ್ನು ಕುರಿತು ಎಚ್ಚರಿಸಿದ್ದ ವಿಷಯವನ್ನಾಗಲಿ ಸೂಚಿಸುತ್ತದೆ.

7. ಪೌಲನು ಮನುಷ್ಯರನ್ನು ಮೆಚ್ಚಿಸುವದಕ್ಕಾಗಿ ಬೋಧಿಸುತ್ತಾನೆಂದು ಕಳ್ಳಬೋಧಕರು ಹೇಳಿದಾಗ್ಯೂ, ಇದರಲ್ಲಿರುವ ಖಂಡಿತವಾದ ಮಾತುಗಳನ್ನು ಯೋಚಿಸುವಾಗ, ಅವನು ಮನುಷ್ಯರನ್ನು ಮೆಚ್ಚಿಸುವದಕ್ಕಲ್ಲ, ದೇವರ ಮಹಿಮೆಯನ್ನು ಕೋರಿ ಯಥಾರ್ಥವಾಗಿ ಪ್ರಸಂಗಿಸಿದನೆಂದು ಪ್ರಕಟವಾಗಿದೆ.

8. ಮೊದಲನೇ ವಚನದಲ್ಲಿ ತಾನು ಹೊಂದಿದ್ದ ಅಪೊಸ್ತಲ ಅಧಿಕಾರವು ಮನುಷ್ಯರಿಂದಲ್ಲ, ದೇವರಿಂದಲೇ ಬಂತೆಂದು ಹೇಳಿದ ಪ್ರಕಾರ, ಇಲ್ಲಿ ತಾನು ಹೊಂದಿದ ಸುವಾರ್ತೆಯ ಸೇವೆಯು ಮನುಷ್ಯರ ಬೋಧನೆಯಿಂದಲ್ಲ, ಕ್ರಿಸ್ತನ ಪ್ರಕಟಣೆಯಿಂದಲೂ ಬೋಧನೆಯಿಂದಲೂ ಹೊಂದಿದೆನೆಂದು ಹೇಳುತ್ತಾನೆ. ದೇವರ ಬೋಧನೆಯಿಂದಲೇ ಉಂಟಾದ ಸೇವೆಯು ಆತನ ಚಿತ್ತಕ್ಕೆ ಸಮರ್ಪಕವಾದದ್ದಾಗಿರುವದು. ಈ ಮಹಿಮೆಯಾದ ಸೇವೆಯ ಉತ್ಪತ್ತಿಯನ್ನೂ ಪ್ರಯೋಜನವನ್ನೂ ಗುರಿಯನ್ನೂ ಯೋಚಿಸುವಾಗ ಇದು ಮನುಷ್ಯನಿಂದಲ್ಲ, ಕ್ರಿಸ್ತನಿಂದಲೇ ಉಂಟಾಯಿತೆಂಬುವದು ಪ್ರತ್ಯಕ್ಷವಾಗಿದೆ.



೧೩ ಹ್ಯಾಗಂದರೆ ಒಂದು ಕಾಲ [1]ಯೆಹೂದ್ಯ ಮತದಲ್ಲಿ ಇದ್ದ ನನ್ನ ನಡತೆಯನ್ನು ಕೇಳಿದಿರಿ; ಏನಂದರೆ ದೇವರ
೧೪ ಸಭೆಯನ್ನು ಮಿತಿ ಇಲ್ಲದೆ ಹಿಂಸೆ ಪಡಿಸಿ, ಅದನ್ನು ಹಾಳು ಮಾಡಿ, ಪಿತೃಸಂಪ್ರದಾಯಗಳಲ್ಲಿ ಅಧಿಕವಾಗಿ
ಆಸಕ್ತಿ ಪಟ್ಟು, ನನ್ನ ಜಾತಿಯವರಾದ ಅನೇಕ [2]ಸಮ ವಯಸ್ಸಿನವರಿಗಿಂತ ಯೆಹೂದ್ಯ ಮತದಲ್ಲಿ ಹೆಚ್ಚಿದೆನು.
೧೫ ಆದರೆ ನನ್ನ [3]ತಾಯಿಯ ಗರ್ಭದಿಂದ ನನ್ನನ್ನು ಪ್ರತ್ಯೇಕಿಸಿ, ತನ್ನ ಕೃಪೆಯ ಮೂಲವಾಗಿ ಕರೆದ ದೇವರು,
೧೬ ನಾನು ಜನಾಂಗಗಳಲ್ಲಿ ಅವನನ್ನು ಪ್ರಸಂಗಿಸುವ ಹಾಗೆ, ತನ್ನ ಮಗನನ್ನು [4]ನನ್ನಲ್ಲಿ ಪ್ರಕಟ ಮಾಡ ಮನ
೧೭ ಸ್ಕರಿಸಿದಾಗ, ಸಂಗಡಲೇ [5]ರಕ್ತ ಮಾಂಸಗಳ ಕೂಡ ಯೋಚನೆ ಮಾಡದೆ, ಯೆರೂಸಲೇಮಿಗೆ ನನಗೆ ಮುಂ
ಚೆ ಅಪೊಸ್ತಲರಾಗಿದ್ದವರ ಬಳಿಗೆ ಏರಿ ಹೋಗದೆ, ಅರಾಬ್ಯಕ್ಕೆ ಹೊರಟೆನು; ಮತ್ತು ದಮಸ್ಕಕ್ಕೆ ತಿರಿಗಿ ಬಂ
ದೆನು.
೧೮ ತರುವಾಯ [6]ಮೂರು ವರುಷಗಳ ಮೇಲೆ, ಪೇತ್ರನ [7]ಪರಿಚಿತಿ ಮಾಡಲಿಕ್ಕೆ ಯೆರೂಸಲೇಮಿಗೆ ಏರಿ ಹೋ
೧೯ ಗಿ, ಅವನ ಬಳಿಯ ಹದಿನೈದು ದಿವಸ ವಾಸ ಮಾಡಿದೆನು. ಆದರೆ ಅಪೊಸ್ತಲರಲ್ಲಿ, ಕರ್ತನ ತಮ್ಮನಾದ
೨೦ ಯಾಕೋಬನ ಹೊರ್ತು, ಬೇರೊಬ್ಬನನ್ನು ನೋಡಲಿಲ್ಲ. ನಾನು ನಿಮಗೆ ಬರೆಯುವವುಗಳನ್ನು ಕುರಿತು,
೨೧ [8]ದೇವರ ಮುಂದೆ, ಇಗೋ, ಸುಳ್ಳು ಹೇಳುವದಿಲ್ಲ. ತರುವಾಯ ಸುರ್ಯ, [9]ಕಿಲಿಕ್ಯ ಶೀಮೆಗಳಿಗೆ
೨೨ ಬಂದೆನು. ಆದರೆ ಕ್ರಿಸ್ತನಲ್ಲಿರುವ [10]ಯೆಹೂದದ ಸಭೆಗಳಿಗೆ ನನ್ನ ಮುಖದ ಗುರುತು ತಿಳಿಯದೆ ಇತ್ತು.
೨೩ ಮುಂಚೆ ನಮ್ಮನ್ನು ಹಿಂಸಿಸಿದವನು, ತಾನು ಮುಂಚೆ ಹಾಳು ಮಾಡಿದ ವಿಶ್ವಾಸವನ್ನು ಈಗ ಪ್ರಸಂಗಿಸುತ್ತಾ
೨೪ ನೆಂಬುವದನ್ನು ಮಾತ್ರ [11]ಕೇಳಿ, ನನ್ನಲ್ಲಿ ದೇವರನ್ನು ಮಹಿಮೆ ಪಡಿಸಿದರು.

1. ಪೌಲನು ಯೆಹೂದ್ಯ ಮತದಲ್ಲಿದ್ದಾಗ ಮೋಶೆಯ ನ್ಯಾಯಪ್ರಮಾಣಕ್ಕೆ ಮಾತ್ರವಲ್ಲ, ಹಿರಿಯರ ಸಂಪ್ರದಾಯಗಳಿಗೂ ಒಳಪಟ್ಟು ನಡೆದನೆಂದು ತಿಳಿಯ ತಕ್ಕದ್ದು. (೧೩, ೧೪ನೇ ವಚನಗಳನ್ನೂ ಅಪೊ. ಕ್ರಿ. ೨೨. ೩, ೪. ವಚನಗಳನ್ನೂ ಸರಿ ನೋಡ ಬೇಕು.)

2. ಅನೇಕ ಸಮ ವಯಸ್ಸಿನವರಿಗಿಂತ ಎಂಬುವದು, ಒಂದು ವೇಳೆ ಗಮಾಲಿಯೇಲನೆಂಬ ಯೆಹೂದ್ಯ ಶಾಸ್ತ್ರಿಯ ಬಳಿಯಲ್ಲಿ ಪೌಲನ ಸಂಗಡ ವೇದಶಾಸ್ತ್ರ ಕಲಿತವರನ್ನು ಸೂಚಿಸುತ್ತದೆ. (ಅಪೊ. ಕ್ರಿ. ೨೨. ೩.) ಅವನಿಗೆ ಯೆಹೂದ್ಯ ಮಾರ್ಗದಲ್ಲಿ ಉಂಟಾಗಿದ್ದ ಮಿತಿ ಮೀರಿದ ವೈರಾಗ್ಯವು ಕ್ರೈಸ್ತಸಭೆಯನ್ನು ಹಾಳು ಮಾಡುವಂತೆ ಮಾಡಿತು.

3. ತಾಯಿಯ ಗರ್ಭದಿಂದ ಎಂಬುವದು ಅವನ ಜನನವನ್ನು ಕುರಿತದ್ದು. ಪೌಲನು ಹುಟ್ಟಿದ ದಿವಸ ಮೊದಲುಗೊಂಡು ದೇವರು ಈ ಮಹಿಮೆಯ ಸೇವೆಗಾಗಿ ಅವನನ್ನು ನೇಮಿಸಿ, ತಕ್ಕ ಕಾಲದಲ್ಲಿ ಅದನ್ನು ಮಾಡುವದಕ್ಕೆ ಕರೆದನು. (ಅಪೊ. ಕ್ರಿ. ೯. ೧೫; ೧೬. ೨.)

4. ದೇವರು ಕ್ರಿಸ್ತನನ್ನು ಪೌಲನ ಕಣ್ಣುಗಳಿಗೆ ಮಾತ್ರವಲ್ಲ, ಅವನ ಹೃದಯದಲ್ಲಿಯೂ ಪ್ರಕಟ ಮಾಡಿದನು. ಅದರಿಂದ ಅವನ ಮನಸ್ಸೂ ಹೃದಯವೂ ಕರಗಿ ಭಕ್ತಿವಿನಯದಿಂದ ದೇವರ ಬಳಿಗೆ ಬರ ಹೇತುವೆಯಾಯಿತು. ಅವನು ದಮಸ್ಕಕ್ಕೆ ಹೋಗುವ ಮಾರ್ಗದಲ್ಲಿ ಗುಣ ಪಡುವಿಕೆ ಅವನಲ್ಲಿ ಪ್ರಾರಂಭಿಸಿತು. (ಅಪೊ. ಕ್ರಿ. ೯.)

5. ರಕ್ತ ಮಾಂಸಗಳು ಅಂದರೆ, ಸಾಯ ತಕ್ಕ ಮನುಷ್ಯರೆಂಬುವದು. (೧ಕೊರಿ. ೧೫. ೫೦.) ಪೌಲನು ಹೃದಯದಲ್ಲಿ ಬೆಳಕು ಹೊಂದಿದ ಮಾತ್ರದಲ್ಲಿ, ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಮುಂತಾದ ಯಾರ ಬಳಿಯಲ್ಲಿಯೂ ಆಲೋಚನೆ ಮಾಡದೆ, ಏಕಾಂತವಾಗಿದ್ದು ಜಪಧ್ಯಾನ ಮಾಡುವದಕ್ಕೆ ಅರಾಬ್ಯಕ್ಕೆ ಹೋದನು. ಅವನು ಅಲ್ಲಿ ಎಷ್ಟು ಕಾಲವಿದ್ದನೋ ತಿಳಿಯದು. (ಅಪೊ. ಕ್ರಿ. ೯. ೧೯—೨೩.)

6. ಮೂರು ವರುಷ ಎಂಬುವದು, ಅವನು ಗುಣ ಪಟ್ಟ ತರುವಾಯದ ಕಾಲವೆಂದು ತೋರುತ್ತದೆ. (ಅಪೊ. ಕ್ರಿ. ೯. ೨೬—೩೦.)

7. ಮೂರು ವರುಷಗಳ ತರುವಾಯ ಅವನು ಪೇತ್ರನ ಪರಿಚಿತಿ ಮಾಡಿ ಕೊಳ್ಳುವದಕ್ಕೆ ಯೆರೂಸಲೇಮಿಗೆ ಹೋದನೇ ಹೊರ್ತು, ಅವನಿಂದ ಬೋಧನೆ ಹೊಂದುವದಕ್ಕಲ್ಲ. ಹದಿನೈದು ದಿವಸಗಳಲ್ಲಿ ಯಾವ ಬೋಧನೆ ಹೊಂದಲಾಗುವದು? ಅವನು ಅಲ್ಲಿ ಹದಿನೈದು ದಿವಸಗಳಿದ್ದ ಮೇಲೆ ತನ್ನ ಪ್ರಾಣ ತಪ್ಪಿಸಿ ಕೊಳ್ಳುವದಕ್ಕೆ ಓಡಿ ಹೋಗ ಬೇಕಾಯಿತು. (ಅಪೊ. ಕ್ರಿ. ೯. ೨೮—೩೦.)

8. ತಾನು ಹೇಳಿದ್ದೆಲ್ಲಾ ಸತ್ಯವೆಂದೂ, ತನಗಿರುವ ಅಪೊಸ್ತಲ ಅಧಿಕಾರವು ದೇವರಿಂದ ಬಂದದ್ದೆಂದೂ, ಸರ್ವಸಾಕ್ಷಿಯಾದ ದೇವರ ಮುಂದೆ ಪ್ರಮಾಣಿಕವಾಗಿ ಹೇಳುತ್ತಾನೆ. ತಕ್ಕ ಸಮಯಗಳಲ್ಲಿ ಪ್ರಮಾಣ ಮಾಡುವದು ನ್ಯಾಯವೆಂದು ತಿಳಿಯ ಬಹುದು.

9. (ಅಪೊ. ಕ್ರಿ. ೯. ೩೦; ೨೨. ೧೮. ವಚನಗಳ ವ್ಯಾಖ್ಯಾನ ನೋಡ ಬೇಕು.) ಯೆಹೂದ್ಯರ ಮೋಸದ ಆಲೋಚನೆಗೆ ತಪ್ಪಿಸಿ ಕೊಳ್ಳುವ ಹಾಗೆ ದೇವದರ್ಶನೆಯಿಂದ ಎಚ್ಚರಿಸಲ್ಪಟ್ಟು, ತನ್ನ ಸ್ವಂತ ದೇಶಕ್ಕೂ ಪಟ್ಣಕ್ಕೂ ಹೋದನು.

10. ಯೆರೂಸಲೇಮಿನ ಸಭೆಯ ಹೊರ್ತು, ಯೆಹೂದದಲ್ಲಿದ್ದ ಬೇರೆ ಸಭೆಗಳಿಗೆ ಅವನು ಆ ಕಾಲದಲ್ಲಿ ಪರಿಚಿತಿ ಇಲ್ಲದವನಾಗಿದ್ದನು.

11. ಒಂದು ಕಾಲದಲ್ಲಿ ಸರ್ವನಾಶ ಮಾಡ ಬೇಕೆಂದು ವೈರಾಗ್ಯ ಹಿಡಿದಿದ್ದ ಕ್ರಿಸ್ತನ ಮಾರ್ಗವನ್ನು ಅವನು ಅದೇ ವೈರಾಗ್ಯದಿಂದ ಪ್ರಸಂಗಿಸುವದನ್ನು ಅವರು ಕೇಳಿ, ದೇವರು ಅವನಿಗೆ ಅನುಗ್ರಹಿಸಿದ ದೊಡ್ಡ ಕೃಪೆಗೋಸ್ಕರ ಆತನನ್ನು ಸ್ತುತಿಸಿದರು. (ಅಪೊ. ಕ್ರಿ. ೯. ೨೬—೩೦.)

2. ತರುವಾಯ [1]ಹದಿನಾಲ್ಕು ವರುಷವಾದ ಮೇಲೆ, ಬಾರ್ನಬನ ಸಂಗಡ, [2]ತೀತನನ್ನು ಸಹ ಕರಕೊಂಡು,
೨ ತಿರಿಗಿ ಯೆರೂಸಲೇಮಿಗೆ ಏರಿ ಹೋದೆನು; [3]ಪ್ರಕಟಣೆಯ ಪ್ರಕಾರ ಏರಿ ಹೋದೆನು; ಮತ್ತು ನಾನು ಓಡು
ವದು, ಇಲ್ಲವೆ ಓಡಿದ್ದು, ವ್ಯರ್ಥವಾಗದ ಹಾಗೆ, ಅವರ ಮುಂದೆ [4]ಹೆಸರ್ಗೊಂಡವರಲ್ಲಿ ಒಬ್ಬೊಬ್ಬನ ಮುಂದೆ,
೩ ನಾನು ಜನಾಂಗಗಳಲ್ಲಿ ಸಾರುವ ಸುವಾರ್ತೆಯನ್ನು ಇಟ್ಟೆನು. ಆದರೆ ನನ್ನ ಸಂಗಡ ಇದ್ದ ತೀತನು ಸಹ
೪ ಗ್ರೀಕನಾಗಿದ್ದರೂ, ಪರಿಛೇದನೆ ಹೊಂದ [5]ಅಗತ್ಯ ಮಾಡಲ್ಪಡಲಿಲ್ಲ; ನಮ್ಮನ್ನು ದಾಸರ ಮಾಡ ಬೇಕೆಂದು,
ಕ್ರಿಸ್ತ ಯೇಸುವಿನಲ್ಲಿ ನಮಗಿರುವ ಸ್ವತಂತ್ರವನ್ನು ಹೊಂಚಿ ನೋಡಲಿಕ್ಕೆ ಹೊಕ್ಕ [6]ಸುಳ್ಳುಸಹೋದರರ
೫ ನಿಮಿತ್ತ, ಸುವಾರ್ತೆಯ ಸತ್ಯವು ನಿಮ್ಮ ಬಳಿಯ ನೆಲೆಯಾಗಿರುವ ಹಾಗೆ, ಅವರಿಗೆ ಘಳಿಗೆಯಾದರೂ ಒಳ
೬ ಗಾಗಿ ಸ್ಥಳ ಕೊಡಲಿಲ್ಲ. ಏನಾದರೂ ಇದ್ದಾರೆಂದು ತೋರುವವರಲ್ಲಿ ಎಂಥವರಾಗಿದ್ದರೂ, ನನಗೆ ವಿಶೇ
ಷವೇನೂ ಇಲ್ಲ; ದೇವರು ಮನುಷ್ಯಮುಖದಾಕ್ಷಿಣ್ಯ ಮಾಡುವದಿಲ್ಲ; ಯಾಕಂದರೆ [7]ಹೆಸರ್ಗೊಂಡವರು
೭ ನನಗೆ ಹೆಚ್ಚೇನೂ ಇಡಲಿಲ್ಲ. ಅದನ್ನು ಬಿಟ್ಟು, ಪೇತ್ರನಿಗೆ ಪರಿಛೇದನೆಯ ಸುವಾರ್ತೆ ಹ್ಯಾಗೋ, ಹಾಗೆ
೮ ಯೇ ಅಪರಿಛೇದನೆಯದು ನನಗೆ ಒಪ್ಪಿಸಲ್ಪಟ್ಟದೆ ಎಂದು ನೋಡಿದರು. ಯಾಕಂದರೆ ಪರಿಛೇದನೆಯ
೯ ಅಪೊಸ್ತಲತನಕ್ಕಾಗಿ ಪೇತ್ರನಿಗೆ ಬಲ ಕೊಟ್ಟವನು, ನನಗೂ ಜನಾಂಗಗಳಿಗಾಗಿ ಬಲ ಕೊಟ್ಟನು. ಮತ್ತು
[8]ಸ್ತಂಭಗಳೆಂದು ಹೆಸರ್ಗೊಂಡವರಾದ ಯಾಕೋಬನೂ, [9]ಕೇಫನೂ, ಯೋಹಾನನೂ, ನನಗೆ ಕೊಡಲ್ಪಟ್ಟ
ಕೃಪೆಯನ್ನು ತಿಳಿದು, ನನಗೂ ಬಾರ್ನಬನಿಗೂ, ನಾವು ಜನಾಂಗಗಳ ಬಳಿಗೂ, ತಾವು ಪರಿಛೇದನೆಯ ಬಳಿ

1. ಪೌಲನ ಜೀವದ ವೃತ್ತಾಂತದಲ್ಲಿ ಅವನ ಗುಣ ಪಡುವಿಕೆಯೇ ಮುಖ್ಯ ಸಂಗತಿ. (೧. ೧೫.) ಹದಿನಾಲ್ಕು ವರುಷವೆಂಬುವದು, ಅವನು ಗುಣ ಪಟ್ಟದ್ದು ಮೊದಲುಗೊಂಡು ಉಂಟಾದ ಕಾಲವನ್ನು ಸೂಚಿಸುತ್ತದೆ. ಅವನು, ಯೆರೂಸಲೇಮಿಗೆ ಹೋದೆನೆಂಬುವದು, ಅವನು ಆ ಪಟ್ಟಣಕ್ಕೆ ಎರಡನೇ ಸಾರಿ ಹೋದದ್ದಲ್ಲ, ಮೂರನೇ ಸಾರಿ ಹೋದದ್ದೆಂದು ತೋರುತ್ತದೆ. ಅವನು ಎರಡನೇ ಸಾರಿ ಧರ್ಮಹಣವನ್ನು ತೆಗೆದು ಕೊಂಡು ಹೋದಾಗ ಪೇತ್ರನು ಮುಂತಾದ ಅಪೊಸ್ತಲರು ಅಲ್ಲಿ ಇರಲಿಲ್ಲ. ಆಗ ವಿಶೇಷವೇನೂ ನಡಿಯಲಿಲ್ಲ. (ಅಪೊ. ಕ್ರಿ. ೧೧. ೩೦.) ಮೂರನೇ ಸಾರಿ ಹೋದಾಗ ಪರಿಛೇದನೆಯನ್ನು ಕುರಿತ ತರ್ಕವನ್ನು ತೀರಿಸುವದಕ್ಕೆ ಒಂದು ಸಂಘವು ಕೂಡಿತು. (ಅಪೊ. ಕ್ರಿ. ೧೫. ಸಂಧಿ.)

2. ತೀತನು ಪರಿಛೇದನೆ ಇಲ್ಲದ ಅನ್ಯಜಾತಿ ಕ್ರೈಸ್ತನಾಗಿಯೂ ಪೌಲನ ಆತ್ಮಭಾವದ ಮಗನಾಗಿಯೂ ಇದ್ದನು. (ತೀತ. ೧. ೧—೪.)

3. ಪೌಲನು ಯೆರೂಸಲೇಮಿಗೆ ಹೋಗ ಅಂತಿಯೋಕ್ಯದ ಸಭೆಯವರ ಅಪ್ಪಣೆ ಆದದ್ದಲ್ಲದೆ, (ಅಪೊ. ಕ್ರಿ. ೧೫. ೩.) ದೇವರ ಕಟ್ಟಳೆ ಸಹ ಇತ್ತು. ಆದದರಿಂದ ಉಂಟಾದ ತರ್ಕದಲ್ಲಿ ಸಭೆಯ ಸ್ತಂಭಗಳಾದ ಯಾಕೋಬನು ಕೇಫನು ಯೋಹಾನನು ಇವರ ಬಳಿಯಲ್ಲಿ (೯. ವ.) ಅವನು ಬೋಧನೆ ಹೊಂದುವವನಾಗಿರದೆ, ಅವರ ಹಾಗೆಯೇ ಅವನು ಸಹ ದೇವರ ಚಿತ್ತವನ್ನು ಪ್ರಕಟ ಮಾಡ ತಕ್ಕ ಶಕ್ತಿಯುಳ್ಳವನಾಗಿದ್ದನು.

4. ಹೆಸರ್ಗೊಂಡವರೆಂಬುವದು, ಯೆರೂಸಲೇಮಿನ ಸಭೆಗೆ ಮುಖ್ಯಸ್ಥರಾಗಿದ್ದ ಯಾಕೋಬನು ಪೇತ್ರನು ಯೋಹಾನನು ಎಂಬುವವರೇ. (೯. ವ.) ಅವರ ಸಂಗಡ ಸುವಾರ್ತೆಯ ಪ್ರಬಲವನ್ನು ಕುರಿತು ಏಕಾಂತವಾಗಿ ಸಂಭಾಷಿಸಿದನು. ಅವರು ಅವನನ್ನು ತಡೆಯುವ ಪ್ರಕಾರ ಏನೂ ಹೇಳದೆ, ಅವನನ್ನು ಉತ್ಸಾಹಪಡಿಸುವ ವಿಧವಾಗಿ ಅನ್ಯೋನ್ಯಕ್ಕೆಂಬ ಗುರುತಾಗಿ ಬಲ ಕೈಗಳನ್ನು ಕೊಟ್ಟರು.

5. ನಾಲ್ಕನೇ ವಚನದಲ್ಲಿ ಹೇಳಲ್ಪಟ್ಟ ಕಳ್ಳಬೋಧಕರು ಅನ್ಯಜಾತಿಯವನಾದ ತೀತನು ಪರಿಛೇದನೆ ಹೊಂದ ಬೇಕೆಂದು ಬಲವಂತ ಮಾಡಿರುವವರು ಎಂದು ತೋರುತ್ತದೆ. ಆದಾಗ್ಯೂ ಪೌಲನು ಅದಕ್ಕೆ ಸ್ಥಳ ಕೊಡಲಿಲ್ಲ.

6. ಕ್ರಿಸ್ತನನ್ನು ಹೊಂದಿದ ವಿಶ್ವಾಸದಿಂದ ಮಾತ್ರ ನೀತಿವಂತರಾಗುತ್ತಾರೆಂಬುವದೇ ಸುವಾರ್ತೆಯ ಸತ್ಯವು. ಇದೇ ಜನಾಂಗಗಳ ಕ್ರೈಸ್ತರು ಅನುಭವಿಸುವ ಸಕಲ ಶ್ಲಾಘ್ಯಗಳಿಗೆ ಕಾರಣವಾಗಿಯೂ, ಪಾಪಾತ್ಮರು ತಾವು ಪರಮ ಗತಿ ಹೊಂದುವೆವೆಂಬ ನಂಬಿಕೆಗೆ ಅಸ್ತಿವಾರವಾಗಿಯೂ ಇದೆ. ಇದನ್ನು ಬೊಂಕುವವರು ಸುಳ್ಳುಸಹೋದರರು ಎಂಬುವದಕ್ಕೆ ಸಂದೇಹವಿಲ್ಲ. ಈ ವಿಷಯದಲ್ಲಿ ಪೌಲನೂ ಬೇರೆ ಅಪೊಸ್ತಲರೂ ಅವರಿಗೆ ಸ್ವಲ್ಪವಾದರೂ ಸ್ಥಳ ಕೊಡಲಿಲ್ಲ.

7. ಇಲ್ಲಿ ಪೌಲನು ತಾನು ಹೇಳುವ ನ್ಯಾಯವನ್ನು ಸ್ಥಾಪಿಸಿ, ತನ್ನ ಸ್ವಾಧೀನ ಅಧಿಕಾರ ತೋರುವ ಹಾಗೆ, ಹೆಸರ್ಗೊಂಡವರು ನನಗೆ ಹೆಚ್ಚೇನೂ ಬೋಧಿಸಲಿಲ್ಲ, ಅನ್ನುತ್ತಾನೆ. ಸಭೆಯಲ್ಲಿ ಹೆಸರ್ಗೊಂಡವರಾದ ಯಾಕೋಬನು, ಪೇತ್ರನು, ಯೋಹಾನನು (೯. ವ.) ಪೌಲನ ಮೇಲೆ ಅಧಿಕಾರ ಸಲ್ಲಿಸುವವರಾಗಿರದೆ, ತಮ್ಮಂತೆಯೇ ಅವನೂ ಬಾರ್ನಬನೂ ಸಮ ಅಧಿಕಾರವುಳ್ಳವರೆಂದೂ, ಯೆಹೂದ್ಯರಿಗೆ ಅಪೊಸ್ತಲನಾಗಿರುವದಕ್ಕೆ ಪೇತ್ರನಿಗೆ ವರವನ್ನು ಕೊಟ್ಟ ದೇವರು, ಜನಾಂಗಗಳಿಗೆ ಅಪೊಸ್ತಲನಾಗಿರುವದಕ್ಕೆ ವರವನ್ನು ಕೊಟ್ಟನೆಂದೂ ಒಪ್ಪಿಕೊಂಡರು. (೧ಕೊರಿ. ೯. ೨.)

8. ಸ್ತಂಭಗಳು ಅಂದರೆ, ಕ್ರಿಸ್ತನ ಮಾರ್ಗವನ್ನೂ ಸಭೆಯನ್ನೂ ಸ್ಥಾಪಿಸುವದಕ್ಕೆ ಮುಖ್ಯ ಆಧಾರಕರೆಂಬ ಅರ್ಥವು.

9. (೧ ಕೊರಿ. ೧. ೧೨. ವಚನದ ವ್ಯಾಖ್ಯಾನ ನೋಡ ಬೇಕು.) ಸಭೆಯಲ್ಲಿ ಹೆಸರ್ಗೊಂಡವರಾಗಿಯೂ ಸ್ತಂಭಗಳಾಗಿಯೂ ಇದ್ದ ಈ ಪ್ರಧಾನ ಅಪೊಸ್ತಲರೇ ಪೌಲನಿಗೆ ಬಲಗೈ ಕೊಟ್ಟು, ಅವನ ಅಧಿಕಾರವನ್ನು ಒಪ್ಪಿ ಕೊಂಡಿರಲಾಗಿ, ಬೇರೊಬ್ಬರು ಅದನ್ನು ಹ್ಯಾಗೆ ಅಲಕ್ಷ್ಯ ಮಾಡ ಬಹುದು?



೧೦ ಗೂ ಹೋಗುವದಕ್ಕೆ, ಅನ್ಯೋನ್ಯಕ್ಕೆಂದು ಬಲ ಕೈಗಳನ್ನು ಕೊಟ್ಟರು. [1]ಬಡವರನ್ನು ಜ್ಞಾಪಕ ಮಾಡಿ
ಕೊಳ್ಳ ಬೇಕೆಂದು ಮಾತ್ರ ಹೇಳಿದರು; ಇದನ್ನೇ ಮಾಡ ಜಾಗ್ರತೆಯಾಗಿದ್ದೆನು.

ಸುವಾರ್ತೆಗೆ ಸರಿ ಬೀಳದ ನಡತೆಯ ನಿಮಿತ್ತ ಪೌಲನು ಪೇತ್ರನನ್ನು ಖಂಡಿಸಿದ್ದು.

೧೧ ಆದರೆ ಪೇತ್ರನು ಅಂತಿಯೋಕ್ಯಕ್ಕೆ ಬಂದಾಗ, ಮುಖಾಮುಖಿಯಾಗಿ ಅವನನ್ನು ಎದುರಿಸಿದೆನು;
೧೨ ಯಾಕಂದರೆ ಅವನು [2]ಅಪರಾಧಕ್ಕೊಳಗಾಗಿದ್ದನು. ಹ್ಯಾಗಂದರೆ ಯಾಕೋಬನಿಂದ ಕೆಲವರು ಬರುವದ
ಕ್ಕಿಂತ ಮುಂಚೆ ಜನಾಂಗಗಳ ಸಂಗಡ ಉಂಡನು; ಆದರೆ ಅವರು ಬಂದ ಮೇಲೆ, ಅವನು ಪರಿಛೇದನೆಯವ
೧೩ ರಿಗೆ ಭಯ ಪಟ್ಟು, ಜಾರಿ, ತನ್ನನ್ನು ಪ್ರತ್ಯೇಕಿಸಿ ಕೊಂಡನು. ಮತ್ತು ಮಿಕ್ಕಾದ ಯೆಹೂದ್ಯರು ಸಹ
ಅವನ ಸಂಗಡ ಕಪಟಸ್ಥರಾದರು; ಈ ಪ್ರಕಾರ [3]ಬಾರ್ನಬನು ಸಹ ಅವರ ಕಪಟದಿಂದ ಕೂಡ ಎಳೆಯಲ್ಪ
೧೪ ಟ್ಟನು. ಆದರೆ ಅವರು ಸುವಾರ್ತೆಯ ಸತ್ಯವನ್ನು ಕುರಿತು [4]ನೆಟ್ಟಗೆ ನಡಿಯದೆ ಇರುವದನ್ನು ಕಂಡು, ನಾನು
ಪೇತ್ರನಿಗೆ ಎಲ್ಲರ ಮುಂದೆ ಹೇಳಿದ್ದೇನಂದರೆ, ನೀನು ಯೆಹೂದ್ಯನಾಗಿದ್ದು, ಯೆಹೂದ್ಯರ ಹಾಗಲ್ಲ, ಜನಾಂ
ಗಗಳ ಹಾಗೆ ಬದುಕಿದರೆ, ಜನಾಂಗಗಳಿಗೆ ಯೆಹೂದ್ಯರನ್ನು ಅನುಸರಿಸ ಅಗತ್ಯ ಮಾಡುವದೇನು?
೧೫, ೧೬ ನಾವು ಜನಾಂಗಗಳವರಾದ [5]ಪಾಪಿಷ್ಠರಲ್ಲ, ಹುಟ್ಟು ಯೆಹೂದ್ಯರಾಗಿದ್ದು, ಯೇಸು ಕ್ರಿಸ್ತನ ವಿಶ್ವಾಸದ
ಮೂಲವಾಗಿ ಅಲ್ಲದೆ, ನ್ಯಾಯಪ್ರಮಾಣದ ಕ್ರಿಯೆಗಳಿಂದ ಮನುಷ್ಯನು ನೀತಿನಿರ್ಣಯ ಪಡುವದಿಲ್ಲವೆಂದು

1. ಬಡವರು ಅಂದರೆ, ವಿಶೇಷವಾಗಿ ಯೆಹೂದದಲ್ಲಿರುವ ಬಡ ಕ್ರೈಸ್ತರು. (ರೋಮಾ. ೧೫. ೨೬.) ಅವರಲ್ಲಿ ಅನೇಕರು ಕ್ರಿಸ್ತನ ನಿಮಿತ್ತ ತಮ್ಮ ಆಸ್ತಿಯನ್ನು ಕೊಳ್ಳೆ ಕೊಟ್ಟವರು. (ಇಬ್ರೀ. ೧೦. ೩೪.) ಬಡವರಿಗೆ ಧರ್ಮಸಹಾಯ ಮಾಡುವದರ ವಿಷಯ ಪೌಲನಿಗೆ ಬೇರೆ ಅಪೊಸ್ತಲರು ಹೇಳಿ ತಿಳಿಸ ತಕ್ಕ ಅವಶ್ಯವಿಲ್ಲ. ಆ ಪ್ರೀತಿಯ ಕೆಲಸವನ್ನು ಅವನೇ ಅಧಿಕ ಅಪೇಕ್ಷೆಯಿಂದ ಮಾಡಿ, ಜನಾಂಗಗಳ ಕ್ರೈಸ್ತರಿಗೆ ಅದರ ವಿಷಯ ಆಗಾಗ್ಯೆ ಹೇಳುತ್ತಿದ್ದನು. ಎರಡು ಸಾರಿ ಅವರು ಕೊಟ್ಟ ಧರ್ಮಹಣವನ್ನು ಯೆರೂಸಲೇಮಿಗೆ ತಕ್ಕೊಂಡು ಹೋದನು. ತಾನು ಗುಣ ಪಡುವದಕ್ಕಿಂತ ಮುಂಚೆ ಯೆಹೂದದ ಬಡ ಕ್ರೈಸ್ತರಿಗೆ ತಾನು ಮಾಡಿದ ಅನ್ಯಾಯವನ್ನು ನೆನಸಿ ಕೊಂಡು, ಈಗಲವರಿಗೆ ಇಂಥಾ ಪ್ರೀತಿಯ ಸೇವೆಯನ್ನು ಬಹಳ ಮನಸ್ಸಾಗಿ ಮಾಡಿರುವನು.

2. ಪೇತ್ರನ ನಡತೆ ಅಪರಾಧವುಳ್ಳದ್ದಾಗಿತ್ತು. ಜನಾಂಗಗಳ ಸಂಗಡ ಕಲೆತು ಉಣ್ಣುವದು ದೋಷವಲ್ಲವೆಂದು ದೇವರ ಚಿತ್ತದಿಂದ ತಿಳಿದು ಕೊಂಡಿದ್ದಾಗ್ಯೂ, (ಅಪೊ. ಕ್ರಿ. ೧೦. ೧೫.) ಪೇತ್ರನು ಅದೇ ಮೇರೆಗೆ ನಡೆದಿದ್ದಾಗ್ಯೂ, (ಅಪೊ. ಕ್ರಿ. ೧೧. ೩, ೧೭; ೧೫. ೯.) ಈ ಸಮಯದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ನಡೆದದ್ದು ದೊಡ್ಡ ತಪ್ಪೇ. ಆದಾಗ್ಯೂ ಪೌಲನಿಂದ ಅವನು ಖಂಡಿಸಲ್ಪಟ್ಟಾಗ ತನ್ನ ತಪ್ಪನ್ನು ಗ್ರಹಿಸಿ ನೆಟ್ಟಗೆ ನಡೆದನು. ಮತ್ತು ತನ್ನನ್ನು ಖಂಡಿಸಿದ ಪೌಲನ ಮೇಲೆ ಆಕ್ರೋಶ ಪಡದೆ ನಡೆದನೆಂದು ತೋರುತ್ತದೆ. (೨ ಪೇತ್ರ. ೩. ೧೫, ೧೬.)

3. ತಾವು ಮಾಡಿದ್ದು ಸುವಾರ್ತೆಯ ಸತ್ಯಕ್ಕೆ ಸರಿ ಬೀಳದ ಕಾರ್ಯವೆಂದು ತಿಳಿದಿದ್ದಾಗ್ಯೂ, ಅದಕ್ಕೆ ವ್ಯತಿರಿಕ್ತವಾಗಿ ನಡೆದದ್ದು ಕಪಟವಲ್ಲವೋ? ಬಾರ್ನಬನೂ ಬೇರೆ ಯೆಹೂದ್ಯರೂ ತಪ್ಪು ಮಾಡಿದರು. ಯಾಕೋಬನ ಕಡೆಯಿಂದ ಅವರು ಬರುವದಕ್ಕಿಂತ ಮುಂಚೆ ಸರಿಯಾಗಿದ್ದ ಕಾರ್ಯವು, ಅವರು ಬಂದ ಮೇಲೆ ಸರಿಯಲ್ಲದೆ ಹೋದದ್ದು ಹ್ಯಾಗೆ? ಲೋಕದ ಭಯವು ಆತ್ಮಕ್ಕೆ ಉರ್ಲು ಎಂಬ ಮಾತು ಸತ್ಯವಾಗಿದೆ.

4. ಯೆಹೂದ್ಯರೂ ಜನಾಂಗಗಳವರೂ ಆದ ಸಮಸ್ತ ಜನರೂ ಕ್ರಿಸ್ತನನ್ನು ಭಕ್ತಿವಿಶ್ವಾಸದಿಂದ ಹೊಂದಿ ಕೊಂಡರೆ, ಪರಮ ಗತಿ ಹೊಂದುವರೆಂಬುವದೇ ಸುವಾರ್ತೆಯ ಸತ್ಯವು. (೧೬. ವ.) ಈ ಸತ್ಯಕ್ಕೆ ವಿರೋಧವಾಗಿ ನಡಿಯುವದು ಬಹಳ ಕೇಡಿಗೆ ಹೇತುವೆಯಾಗುವದು. ಹೀಗೆ ನಡಿಯುವವರು ಶ್ರೇಷ್ಠ ಗುರುಗಳಾಗಿದ್ದಾಗ್ಯೂ, ಅವರಿಗೆ ಭಯ ಪಡದೆ ಅವರ ತಪ್ಪನ್ನು ತೋರಿಸುವದು ಉತ್ತಮ ಬೋಧಕರಿಗೆ ತಕ್ಕ ಲಕ್ಷಣವಾಗಿದೆ.

5. ಯೆಹೂದ್ಯರು ಜನಾಂಗಗಳವರನ್ನು ಪಾಪಿಷ್ಠರೆಂದು ಅನ್ನುತ್ತಿದ್ದರು. ಪೌಲನು ಆ ಮಾತನ್ನು ತಕ್ಕೊಂಡು, ಯೆಹೂದ್ಯರಾದ ನಾವು ಪಾಪಿಷ್ಠರಾದ ಜನಾಂಗಗಳವರಿಗೆ ಜನ್ಮದ ಪ್ರಕಾರ ಭೇದಪಟ್ಟದ್ದಾಗ್ಯೂ, ನಾವು ಸಹ ನ್ಯಾಯಪ್ರಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ವಾಸದಿಂದಲೇ ದೇವರ ಸಮುಖದಲ್ಲಿ ನೀತಿವಂತರಾಗಿ ಕಾಣಿಸಲ್ಪಡ ಬೇಕೆಂಬ ಸತ್ಯವನ್ನು ಒಪ್ಪಿಕೊಂಡವರಾಗಿದ್ದೇವೆ, ಅನ್ನುತ್ತಾನೆ. (೧೪—೨೧. ವ.) ಪೌಲನು ಪೇತ್ರನ ಬಳಿಯಲ್ಲಿ ಅವನ ತಪ್ಪನ್ನು ತೋರಿಸ ತಕ್ಕ ವಿಧವಾಗಿ ಮಾಡಿದ ಸಂಭಾಷಣೆ ಅಡಗಿ ಇದೆ. ಅದರಲ್ಲಿ ಅವನು ಕ್ರಿಸ್ತಮಾರ್ಗದ ಸತ್ಯಕ್ಕೆ ತಕ್ಕ ಮೊದಲನೇ ನ್ಯಾಯಗಳನ್ನು ಹೇಳುತ್ತಾನೆ. (೧೪. ವ.) ನ್ಯಾಯಪ್ರಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ವಾಸದಿಂದಲೇ ಪರಮ ಗತಿ ಹೊಂದ ಬಹುದೆಂಬ ಉಪದೇಶದಿಂದ ಪಾಪವು ಹೆಚ್ಚುವದೇ ಹೊರ್ತು ಪ್ರಯೋಜನವಿಲ್ಲವೆಂದು ಹೇಳಿದ ಶತ್ರುಗಳ ಆಕ್ಷೇಪಣೆಗೆ ಸಮಾಧಾನ ಹೇಳುವ ರೀತಿಯಾಗಿ, (ರೋಮಾ. ೬. ಸಂಧಿ.) ಕ್ರಿಸ್ತನು ತನ್ನಲ್ಲಿ ವಿಶ್ವಾಸವಿಟ್ಟ ಪಾಪಾತ್ಮರನ್ನು ಪುಣ್ಯಾತ್ಮರಾಗ ಮಾಡುವದರಿಂದ ಆತನು ಪಾಪಕ್ಕೆ ಕಾರಣನಲ್ಲವೆಂದೂ, ಪೇತ್ರನ ಹಾಗಿರುವ ದೇವಭಕ್ತರು ವಿಶ್ವಾಸದಿಂದ ಮಾತ್ರ ರಕ್ಷಿಸಲ್ಪಡುವರೆಂದೂ ನಂಬಿದಾಗ್ಯೂ, ಅದಕ್ಕೆ ವ್ಯತಿರಿಕ್ತವಾಗಿ ನ್ಯಾಯಪ್ರಮಾಣವನ್ನು ಕೈಕೊಳ್ಳುವದರಿಂದ ಸ್ವಂತ ಪುಣ್ಯವನ್ನು ಸ್ಥಾಪಿಸುವದಕ್ಕೆ ಪ್ರಯತ್ನ ಮಾಡಿದರೆ, ತಮ್ಮನ್ನು ಪಾಪಿಷ್ಠರಾಗ ಮಾಡಿಕೊಳ್ಳುತ್ತಾರೆ, ಅನ್ನುತ್ತಾನೆ.

ತಿಳಿದು, ನಾವು ನ್ಯಾಯಪ್ರಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ವಾಸದಿಂದ ನೀತಿನಿರ್ಣಯ ಪಡುವ
ದಕ್ಕೆ ಕ್ರಿಸ್ತ ಯೇಸುವನ್ನು ವಿಶ್ವಾಸಿಸಿದೆವು; ಯಾಕಂದರೆ ನ್ಯಾಯಪ್ರಮಾಣದ ಕ್ರಿಯೆಗಳಿಂದ ಯಾವ
೧೭ ಮಾಂಸವಾದರೂ ನೀತಿನಿರ್ಣಯ ಪಡದು. ಆದರೆ [1]ಕ್ರಿಸ್ತನಿಂದ ನೀತಿನಿರ್ಣಯ ಪಡುವ ಹಾಗೆ ಹುಡುಕು
ವಾಗ, ನಾವು ಪಾಪಿಷ್ಠರಾಗಿ ಕಾಣಲ್ಪಟ್ಟರೆ, ಅದರಿಂದ ಕ್ರಿಸ್ತನು ಪಾಪದ ಸೇವಕನೋ? ಆಗದು.
೧೮ ಯಾಕಂದರೆ ನಾನು ಕೆಡವಿದವುಗಳನ್ನೇ ತಿರಿಗಿ ಕಟ್ಟಿದರೆ, ನನ್ನನ್ನು ಮೀರುವವನಾಗಿ ತೋರಿಸುತ್ತೇನೆ.
೧೯ ಯಾಕಂದರೆ ನಾನು ದೇವರಿಗೆ ಬದುಕುವ ಹಾಗೆ, ನ್ಯಾಯಪ್ರಮಾಣದಿಂದ ನ್ಯಾಯಪ್ರಮಾಣಕ್ಕೆ [2]ಸತ್ತೆನು.
೨೦ ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟೆನು. ಆದರೆ [3]ಬದುಕುತ್ತೇನೆ; ಇನ್ನು ನಾನಲ್ಲ, ಕ್ರಿಸ್ತನೇ ನನ್ನಲ್ಲಿ ಬದು
ಕುತ್ತಾನೆ; ಹೀಗಿರಲಾಗಿ ನಾನು ಈಗ ಮಾಂಸದಲ್ಲಿ ಬದುಕುವದು, ನನ್ನನ್ನು ಪ್ರೀತಿ ಮಾಡಿ, ತನ್ನನ್ನು ನನ
೨೧ ಗೋಸ್ಕರ ಕೊಟ್ಟ ದೇವರ ಮಗನ ಮೇಲಿರುವ ವಿಶ್ವಾಸದಲ್ಲಿ ಬದುಕುತ್ತೇನೆ. ನಾನು ದೇವರ ಕೃಪೆಯನ್ನು
[4]ತೆಗೆದು ಹಾಕುವದಿಲ್ಲ; ಯಾಕಂದರೆ ನ್ಯಾಯಪ್ರಮಾಣದಿಂದ ನೀತಿ ಉಂಟಾದರೆ, ಕ್ರಿಸ್ತನು ಸುಮ್ಮನೆ
ಸತ್ತನು.

### ಸುವಾರ್ತೆಯಿಂದ ಉಂಟಾಗುವ ಶ್ರೇಷ್ಠ ಆಶೀರ್ವಾದಗಳು.

3. ಓ [5]ಬುದ್ಧಿಹೀನ ಗಲಾತ್ಯರೇ! ಸತ್ಯಕ್ಕೆ ವಿಧೇಯರಾಗದ ಹಾಗೆ, [6]ಯಾವನು ನಿಮಗೆ ಮಾಟ ಮಾಡಿದ

1. ಕ್ರಿಸ್ತನಿಂದ ಎಂಬುವದು ಕ್ರಿಸ್ತನಲ್ಲಿ ನಮಗಿರ ತಕ್ಕ ಐಕ್ಯವನ್ನು ಕುರಿತು ಹೇಳಲ್ಪಟ್ಟದೆ.

2. ಪೌಲನು ಗುಣ ಪಟ್ಟಾಗ ಉತ್ತಮ ವಿಶ್ವಾಸದಿಂದ ಕ್ರಿಸ್ತನ ಸಂಗಡ ಬಹಳ ಐಕ್ಯವುಳ್ಳವನಾಗಿದ್ದದರಿಂದ, ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟು, ನ್ಯಾಯಪ್ರಮಾಣದ ಕೋಪಕ್ಕೂ ಶಾಪಕ್ಕೂ ತೊಲಗಿ ಅದಕ್ಕೆ ಸತ್ತವನಾದನು. (೩. ೧೪. ರೋಮಾ. ೬. ೪.)

3. ಮರಣದಿಂದ ಜೀವ ಬರುವದು ಅದ್ಭುತವಲ್ಲವೋ? ತನ್ನ ಪುಣ್ಯಮರಣದಿಂದ ಮರಣವನ್ನು ಜಯಿಸಿ, ನಿತ್ಯಜೀವದ ಬಾಗಲನ್ನು ತೆರೆದವನಾದ ಸತ್ಯಪರನನ್ನು ಹೊಂದಿ ಕೊಳ್ಳುವಾಗ ಈ ಅದ್ಭುತವು ನಡಿಯುತ್ತದೆ. ಕಟ್ಟುಮರದಲ್ಲಿ ಹುಳಿ ರಸವು ಹೋಗಿ ಶೀ ರಸವು ಏರುವ ಪ್ರಕಾರ, ಸದ್ಗುರುವನ್ನು ಹೊಂದಿದ ಭಕ್ತರಲ್ಲಿ ಮರಣವೆಂಬುವ ಹುಳಿ ತೊಲಗಿ, ಜೀವವೆಂಬ ಮಧುರ ಉಂಟಾಗುತ್ತದೆ. ಆತನೇ ಅವರ ಅಂತರ್ಯದಲ್ಲಿ ವಾಸ ಮಾಡಿ ಕೊಂಡಿರುವದರಿಂದ ಈ ಅತಿಶಯವು ಸಂಭವಿಸುತ್ತದೆ. ಆತನೇ ಅವರ ಆತ್ಮದ ಜೀವಕ್ಕೂ ಶರೀರದ ಜೀವಕ್ಕೂ ನಾಯಕನಾಗಿದ್ದಾನೆ.

4. ನಾನು ನ್ಯಾಯಪ್ರಮಾಣಕ್ಕೆ ತಕ್ಕ ನೀತಿಯನ್ನು ಹುಡುಕುವದರಿಂದ ಕ್ರಿಸ್ತನಲ್ಲಿ ಪ್ರಕಟವಾದ ದೇವರ ಕೃಪೆಯನ್ನು ವ್ಯರ್ಥ ಮಾಡುವದಿಲ್ಲ. ನ್ಯಾಯಪ್ರಮಾಣದ ನೀತಿಯು ಮನುಷ್ಯರ ರಕ್ಷಣೆಗೆ ಸಾಕಾದದ್ದಾಗಿದ್ದರೆ, ಕ್ರಿಸ್ತನ ಪುಣ್ಯಮರಣವು ವ್ಯರ್ಥವೆಂದು ಹೇಳ ಬೇಕಾಗುವದು. ಹಾಗೆ ಹೇಳ ಧೈರ್ಯ ಪಡುವವನ್ಯಾರು? ಮನುಷ್ಯಸ್ವಭಾವವನ್ನು ಚನ್ನಾಗಿ ತಿಳಿದಿದ್ದ ಪೌಲನು, ಪೇತ್ರನಿಗೆ ಕೋಪ ಬರುವಂತೆ ನೀನು ಎಂದು ಹೇಳದೆ, ನಾನು ಎಂದು ಈ ವಚನಗಳಲ್ಲಿ ಆಗಾಗ್ಯೆ ಹೇಳುತ್ತಾನೆ. ಬೇರೊಬ್ಬರ ತಪ್ಪನ್ನು ತೋರಿಸುವಾಗ, ಅವರೇ ಅಪರಾಧಿಗಳೆಂದೂ, ನಾವು ಅಂಥ ಅಪರಾಧ ಮಾಡ ತಕ್ಕ ಸ್ವಭಾವವುಳ್ಳವರಲ್ಲವೆಂದೂ ಎಣಿಸಿ ಮಾತಾಡಿದರೆ, ಪ್ರಯೋಜನವಾಗಲಾರದು.

5. ಪೌಲನು ತಾನು ದೇವರ ಕೃಪೆಯಿಂದ ಹೊಂದಿದ ಅಪೊಸ್ತಲ ಅಧಿಕಾರದಿಂದ ಪೇತ್ರನನ್ನು ಖಂಡಿಸಿದ್ದನ್ನು ಹೇಳಿದ ತರುವಾಯ, ತಾನು ಪ್ರಸಂಗಿಸಿದ್ದೂ ಅದ್ಭುತಗಳಿಂದ ಸ್ಥಿರ ಪಡಿಸಿದ್ದೂ ಆದ ಕ್ರಿಸ್ತಮಾರ್ಗದ ಸತ್ಯವನ್ನು ಬಿಟ್ಟು ತೊಲಗಿ ಹೋಗಿದ್ದ ಗಲಾತ್ಯ ಸಭೆಯವರ ಸಂಗಡ ತರ್ಕ ಮಾಡುತ್ತಾನೆ. (೧—೫. ವ.) ಅಬ್ರಹಾಮನು ವಿಶ್ವಾಸದಿಂದ ನೀತಿವಂತನಾಗಿ ತೋರಿದ ಪ್ರಕಾರ, ಅಜ್ಞಾನರಾದ ಅವರು ಸಹ ವಿಶ್ವಾಸದಿಂದಲೇ ನೀತಿವಂತರಾಗಬೇಕೆಂದೂ, (೬—೯. ವ.) ಹಾಗೆ ಮಾಡದೆ ನ್ಯಾಯಪ್ರಮಾಣಕ್ಕೊಳಗಾದರೆ, ಕ್ರಿಸ್ತನ ಪುಣ್ಯದಿಂದ ನೀತಿವಂತರಾಗದೆ ಆಜ್ಞೆಗೊಳಗಾಗುವರೆಂದೂ ಹೇಳಿ, (೧೦—೧೪. ವ.) ಹಿಂದೆ ಬಂದ ನ್ಯಾಯಪ್ರಮಾಣವು ಮುಂಚೆ ಬಂದ ವಿಶ್ವಾಸಪ್ರಮಾಣವ ತೆಗೆದು ಹಾಕಲಾರದೆಂದೂ, (೧೫—೧೮. ವ.) ಕ್ರಿಸ್ತನಲ್ಲಿ ಆ ಒಡಂಬಡಿಕೆ ಈಡೇರುವದಕ್ಕೆ ಅನುಕೂಲವಾಗಿ ನ್ಯಾಯಪ್ರಮಾಣವು ಕೊಡಲ್ಪಟ್ಟಿತೆಂದೂ, (೧೯—೨೪.ವ.) ಆ ಒಡಂಬಡಿಕೆಯ ಶ್ಲಾಘ್ಯಗಳನ್ನು ಕ್ರಿಸ್ತನ ದಾಸರೆಲ್ಲರೂ ಭೇದವಿಲ್ಲದೆ ಹೊಂದಿ ಅನುಭವಿಸುವರೆಂದೂ, (೨೫—೨೯. ವ.) ಹೀಗೆ ನ್ಯಾಯಪ್ರಮಾಣದ ಶಾಪಕ್ಕೆ ವಿಮುಕ್ತರಾದ ಅವರು ಅದರ ದಾಸತ್ವಕ್ಕೂ ವಿಮುಕ್ತರಾಗಿ, ಸಂಪೂರ್ಣ ಪ್ರಾಯಸ್ಥರಾದ ಪುತ್ರರ ಹಾಗೆ ನಡಿಸಲ್ಪಡುವರೆಂದೂ ತೋರಿಸುತ್ತಾನೆ. (೪. ೧—೭.) ಹೀಗೆ ಕಠಿಣ ದಾಸತ್ವಕ್ಕೆ ವಿಮುಕ್ತರಾದ ಅವರು ತಿರಿಗಿ ಅದಕ್ಕೊಳಪಡುವದು ಮಹಾ ಬುದ್ಧಿಹೀನವೂ ಮೋಸವೂ ಆದ ಕಾರ್ಯವೆಂದು ತೋರಿಸಿ, (೮—೧೧. ವ.) ಅವರ ಪ್ರಿಯ ಬೋಧಕನಾದ ತನ್ನ ಮೇಲೆ ಅವರು ತೋರಿಸಿದ ಅಕ್ಕರೆಯನ್ನು ಅವರಿಗೆ ಜ್ಞಾಪಕ ಮಾಡಿ, (೧೨—೧೬. ವ.) ಆ ಮಮತೆಯನ್ನು ಕೆಡಿಸುವದಕ್ಕೆ ಪ್ರಯತ್ನಿಸಿದ ಕಳ್ಳಬೋಧಕರಿಗೆ, ಅವರು ತೊಲಗುವ ಹಾಗೆ, ಎಚ್ಚರಿಸುತ್ತಾನೆ. (೧೭—೨೦.ವ.) ಕಡೆಯಲ್ಲಿ ಅಬ್ರಹಾಮನ ಇಬ್ಬರು ಮಕ್ಕಳ ಚರಿತ್ರೆಯನ್ನು ಉಪಮಾನ ಮಾಡಿ, ದಾಸತ್ವಕ್ಕೂ ಸ್ವಾಧೀನ ಸ್ಥಿತಿಗೂ, ನ್ಯಾಯಪ್ರಮಾಣಕ್ಕೂ ವಾಗ್ದತ್ತಕ್ಕೂ ಇರುವ ವ್ಯತ್ಯಾಸವನ್ನು ತೋರಿಸಿ ಪತ್ರಿಕೆಯನ್ನು ಮುಗಿಸುತ್ತಾನೆ.

6. ತಮ್ಮನ್ನು ಸಮರ್ಥರೆಂದು ತೋರಿಸಿದ ಗಲಾತ್ಯರಿಗೆ ಬುದ್ಧಿಹೀನರೆಂಬ ಹೆಸರು ಬಂದದ್ದು ಅವರ ಮನಸ್ಸನ್ನು ಚನ್ನಾಗಿ ತಿದ್ದಿರುವದು. ಬುದ್ಧಿಹೀನರಾದ ಈ ದೇಶದವರು ಕೆಟ್ಟ ದೃಷ್ಟಿಯಿಂದ ಮರುಳಾಗುವರೆಂದು ನೆನಸುವದುಂಟು. ಗಲಾತ್ಯರು



ನು? ಯೇಸು ಕ್ರಿಸ್ತನು ನಿಮ್ಮಲ್ಲಿ [1]ಶಿಲುಬೆಗೆ ಹಾಕಲ್ಪಟ್ಟವನಾಗಿ ನಿಮ್ಮ ಕಣ್ಣುಗಳೆದುರಿಗೆ ಬರೆಯಲ್ಪಡಲಿಲ್ಲ
೨ ವೋ? ಇದನ್ನು ಮಾತ್ರ ನಿಮ್ಮಿಂದ ಕಲಿಯ ಬೇಕೆಂದಿದ್ದೇನೆ—ನೀವು ಆತ್ಮವನ್ನು ಹೊಂದಿದ್ದು, ನ್ಯಾಯಪ್ರ
೩ ಮಾಣದ ಕ್ರಿಯೆಗಳಿಂದಲೋ? [2]ವಿಶ್ವಾಸದ ಕೇಳ್ವಿಕೆಯಿಂದಲೋ? ಇಷ್ಟು ಬುದ್ಧಿಹೀನರಾಗಿದ್ದೀರೋ?
೪ [3]ಆತ್ಮದಲ್ಲಿ ಆರಂಭಿಸಿ, ಈಗ ಮಾಂಸದಲ್ಲಿ ತೀರಿಸುತ್ತೀರೋ? [4]ಇಂಥವುಗಳನ್ನು ನೀವು ತಾಳಿದ್ದು ವ್ಯರ್ಥ
೫ ವೋ? ವ್ಯರ್ಥವಾಯಿತೇನೋ. ಹಾಗಾದರೆ ಆತ್ಮವನ್ನು ನಿಮಗೆ ತಂದು ಕೊಟ್ಟು, [5]ನಿಮ್ಮಲ್ಲಿ ಬಲವಾದ
ಕ್ರಿಯೆಗಳನ್ನು ಯತ್ನಿಸುವವನು ನ್ಯಾಯಪ್ರಮಾಣದ ಕ್ರಿಯೆಗಳಿಂದಲೋ? ವಿಶ್ವಾಸದ ಕೇಳ್ವಿಕೆಯಿಂದಲೋ?
೬ ಹಾಗೆಯೇ ಅಬ್ರಹಾಮನು ದೇವರನ್ನು ವಿಶ್ವಾಸಿಸಿದನು; ಅದು ಆವನಿಗೆ ನೀತಿ ಎಂದು ಎಣಿಸಲ್ಪಟ್ಟಿತು.
೭ (ಉತ್ಪ. ೧೫. ೬.) ಆದದರಿಂದ ವಿಶ್ವಾಸದವರು ಇವರೇ, ಅಬ್ರಹಾಮನ ಮಕ್ಕಳಾಗಿದ್ದಾರೆಂದು ತಿಳಿದು
೮ ಕೊಳ್ಳಿರಿ. ಆದರೆ ವಿಶ್ವಾಸದಿಂದ ದೇವರು ಜನಾಂಗಗಳನ್ನು [6]ನೀತಿನಿರ್ಣಯ ಪಡಿಸುವನೆಂದು ಬರಹವು
ಮುಂಚೆ ನೋಡಿ, ಅಬ್ರಹಾಮನಿಗೆ, ನಿನ್ನಲ್ಲಿ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವೆಂಬ ಸುವಾರ್ತೆಯನ್ನು
೯ (ಉತ್ಪ. ೧೨. ೩; ೧೮. ೮.) ಮುಂತಿಳಿಸಿತು. ಹೀಗಿರಲಾಗಿ ವಿಶ್ವಾಸದವರು [7]ವಿಶ್ವಾಸಿಯಾದ ಅಬ್ರಹಾ
ಮನ ಸಂಗಡ ಆಶೀರ್ವದಿಸಲ್ಪಡುತ್ತಾರೆ.
೧೦ ಯಾಕಂದರೆ ನ್ಯಾಯಪ್ರಮಾಣದ ಕ್ರಿಯೆಗಳವರಷ್ಟು ಶಾಪಕ್ಕೊಳಗಾಗಿದ್ದಾರೆ; ಹ್ಯಾಗಂದರೆ, [8]ನ್ಯಾಯ
ಪ್ರಮಾಣದ ಪುಸ್ತಕದಲ್ಲಿ ಬರೆದ ಎಲ್ಲವುಗಳಲ್ಲಿ, ಅವುಗಳನ್ನು ಮಾಡುವ ಹಾಗೆ, ನೆಲೆಯಾಗಿರದ ಯಾವ
೧೧ ನಾದರೂ ಶಾಪಗ್ರಸ್ತನೆಂದು (ದ್ವಿತೀಯ ನ್ಯಾ. ೨೭. ೨೬.) ಬರೆದದೆ. ನ್ಯಾಯಪ್ರಮಾಣದಿಂದ ಒಬ್ಬನಾ

ಮಾತಿಗೆ ಮರುಳಾದರು. ಒಂದು ವಿಧ ಸರ್ಪವು ತನ್ನ ಕ್ರೂರ ದೃಷ್ಟಿಯಿಂದ ಪಕ್ಷಿಗಳನ್ನು ಭ್ರಾಂತಿಗೊಳಿಸಿ ಅವುಗಳನ್ನು ಹಿಡಿದು ತಿನ್ನುವ ಪ್ರಕಾರ, ಸೈತಾನನೆಂಬ ಗಡಸರ್ಪವೂ ಅವನ ಕಳ್ಳಬೋಧಕರೂ ಗಲಾತ್ಯರ ಮನೋನೇತ್ರವನ್ನು ಮರುಳುಗೊಳಿಸಿ ತಮ್ಮ ಬಲೆಗೆ ಎಳಕೊಂಡರು.

1. ಒಂದು ಪ್ರಕಟಣೆಯಲ್ಲಿ ಇಲ್ಲವೆ ಪಠದಲ್ಲಿ ತೋರಿಸುವ ಪ್ರಕಾರ, ಕ್ರಿಸ್ತನು ಅವರ ಕಣ್ಣೆದುರಿಗೆ ಶಿಲುಬೆಯಲ್ಲಿ ತೂಗಾಡುವವನಂತೆ ಇರಿಸಲ್ಪಟ್ಟದ್ದನು. ಸುವಾರ್ತೆಯ ಪ್ರಸಂಗದಿಂದಲೂ ಪರಿಶುದ್ಧ ಆಚರಣೆಗಳಿಂದಲೂ, ಕ್ರಿಸ್ತನ ಮಹಾ ಪ್ರೀತಿಯು ಅವರಿಗೆ ಪ್ರತ್ಯಕ್ಷವಾಗಿ ತೋರಿ ಇದ್ದರೂ, ಅವರು ಅದನ್ನು ಬಿಟ್ಟು ತೊಲಗಿದ್ದು ಬಹಳ ಆಶ್ಚರ್ಯವಾಗಿದೆ.

2. ಪೌಲನು ಬೇರೆ ವಿಷಯಗಳನ್ನೆಲ್ಲಾ ಬಿಟ್ಟು ಒಂದೇ ವಿಷಯವನ್ನು ಮಾತ್ರ ಕೇಳುತ್ತಾನೆ. ಪರಿಶುದ್ಧಾತ್ಮನಿಂದಾದ ಕೃಪೆಯ ವರಗಳು ನ್ಯಾಯಪ್ರಮಾಣದ ಕ್ರಿಯೆಗಳಿಂದ ಉಂಟಾದ ಫಲವೋ? ವಿಶ್ವಾಸದಿಂದ ಹೊಂದಿದ ಸುವಾರ್ತೆಯ ಸತ್ಯದಿಂದ ಉಂಟಾದ ಫಲವೋ? ಎಂಬುವದೇ ಪ್ರಶ್ನೆ. ಈ ಪ್ರಶ್ನೆಗೆ ಸುವಾರ್ತೆಯ ಸತ್ಯದಿಂದ ಉಂಟಾದ ಫಲವೇ ಎಂದು ಉತ್ತರ ಬರ ತಕ್ಕದ್ದು.

3. ಪರಿಶುದ್ಧಾತ್ಮನೇ ಆತ್ಮದ ಜೀವನಕ್ಕೆ ಕಾರಣನು. ಹೀಗೆ ಆತ್ಮನ ಕೃಪೆಯಿಂದ ಪ್ರಾರಂಭಿಸಿದ ಅವರು ಮಾಂಸಕ್ಕೆ ತಕ್ಕ ಆಚಾರಗಳಿಂದ ಮುಗಿಸ ನೋಡುವದು ಎಷ್ಟು ಬುದ್ಧಿಹೀನತ್ವವು. (ಆತ್ಮಕ್ಕೂ ಮಾಂಸಕ್ಕೂ ಇರುವ ವ್ಯತ್ಯಾಸವನ್ನು ಕುರಿತು, ರೋಮಾ. ೪. ೧, ೨; ೬. ೧೪. ವಚನಗಳ ವ್ಯಾಖ್ಯಾನ ನೋಡ ಬೇಕು.)

4. ನೀವು ಅಜ್ಞಾನಮಾರ್ಗವನ್ನು ಬಿಟ್ಟು ಕ್ರಿಸ್ತನ ಮಾರ್ಗವನ್ನು ಅನುಸರಿಸಿದ್ದರಿಂದ ಬಂದ ಕಷ್ಟಗಳನ್ನೂ ನಷ್ಟಗಳನ್ನೂ ಇಷ್ಟು ಕಾಲ ಅನುಭವಿಸಿದ್ದರಿಂದ ಫಲವೇನು? ಏನೂ ಫಲವಿಲ್ಲದೆ ಹೋಯಿತೆಂದು ಹೇಳ ಬೇಕಾಯಿತಲ್ಲ? ಅನ್ನುತ್ತಾನೆ.

5. (೧ಕೊರಿ. ೧೨. ೬.) ಈ ಪ್ರಶ್ನೆಯೂ ಎರಡನೇ ವಚನದಲ್ಲಿರುವ ಪ್ರಶ್ನೆಯೂ ಒಂದಾಗಿದೆ. ೨—೪. ವರಿಗೂ ಇರುವ ವಚನಗಳಲ್ಲಿ ಕೃಪೆ ಹೊಂದಿದವರ ಅನುಭವವೂ, ೫—೯. ವರಿಗೂ ಇರುವ ವಚನಗಳಲ್ಲಿ ಕೃಪೆಯನ್ನು ಅನುಗ್ರಹಿಸುವವನ ದಿವ್ಯ ನಿರ್ಣಯವೂ ತೋರುತ್ತದೆ. ಅದಕ್ಕೆ ಅಬ್ರಹಾಮನನ್ನು ದೃಷ್ಟಾಂತವಾಗಿ ತೋರಿಸಿ ಇದೆ. (ರೋಮಾ. ೪ನೇ ಸಂಧಿಯ ವ್ಯಾಖ್ಯಾನ ನೋಡ ಬೇಕು.)

6. ವೇದಬರಹವನ್ನು ಉಪಮಾನವಾಗಿ ತೋರಿಸಿ ಇದೆ. ಬರಹವೆಂಬುವ ಜ್ಞಾನಿಯು, ದೇವರು ಜನಾಂಗಗಳವರನ್ನು ವಿಶ್ವಾಸದಿಂದಲೇ ನೀತಿವಂತರಾಗ ಮಾಡುವನೆಂಬುವ ಮಾರ್ಪಡದ ನಿರ್ಣಯವನ್ನು ಮುಂತಿಳಿದು, ಆ ಒಳ್ಳೆ ಸಮಾಚಾರವನ್ನು ಅಬ್ರಹಾಮನಿಗೆ ಆಗಲೇ ತಿಳಿಸಿದನೆಂಬುವದು ಇದರ ತಾತ್ಪರ್ಯವು. ಬರಹಕ್ಕೆಲ್ಲಾ ಮೂಲನಾದ ದೇವರೇ ಹೀಗೆ ಮಾಡಿದನೆಂದು ಹೇಳ ಬಹುದು.

7. ಅಬ್ರಹಾಮನಲ್ಲಿ ವಿಶ್ವಾಸವೇ ಮುಖ್ಯ ಪ್ರಕಾಶವಾಗಿದ್ದ ಸದ್ಗುಣವು. ಆ ಗುಣವುಳ್ಳವರೆಲ್ಲರೂ ಅವನ ಹಾಗೆ ದೇವರ ಆಶೀರ್ವಾದವನ್ನು ಹೊಂದುವರು. (ಲೂಕ. ೧೬. ೨೦. ವಚನದ ವ್ಯಾಖ್ಯಾನ ನೋಡ ಬೇಕು.)

8. ನ್ಯಾಯಪ್ರಮಾಣದ ಕ್ರಿಯೆಗಳಾದ ಸ್ವಂತ ಪುಣ್ಯದಿಂದ ನೀತಿವಂತರಾಗ ಬಹುದೆಂದು ನೆನಸುವವರು ಎಲ್ಲಾ ವಿಷಯಗಳಲ್ಲಿಯೂ ದೇವರ ಕಟ್ಟಳೆಗಳಿಗೆ ಪೂರ್ಣ ವಿಧೇಯರಾಗಿ, ಮನೋವಾಕ್ಕಾಯಗಳಿಂದ ಅವುಗಳನ್ನು ಮೀರದೆ ನಡೆದರೆ, ಅವರಿಗೆ ದೇವರ ಆಶೀರ್ವಾದ ಉಂಟು. ಇಲ್ಲದಿದ್ದರೆ ವೇದದಲ್ಲಿ ಹೇಳಿರುವ ದೇವರ ಶಾಪವೇ ಬರುವದು.

ದರೂ ದೇವರ ಮುಂದೆ ನೀತಿನಿರ್ಣಯ ಪಡುವದಿಲ್ಲವೆಂಬುವದು ಪ್ರಕಟವಾಗಿದೆ; ಯಾಕಂದರೆ [1]ನೀತಿವಂ
೧೨ ತನು ವಿಶ್ವಾಸದಿಂದ ಬದುಕುವನು. (ಹಬ. ೨. ೪.) ಆದರೆ ನ್ಯಾಯಪ್ರಮಾಣವು ವಿಶ್ವಾಸದ್ದಲ್ಲ; ಅವುಗ
೧೩ ಳನ್ನು ಮಾಡುವ ಮನುಷ್ಯನು ಅವುಗಳಲ್ಲಿ ಬದುಕುವನು. (ಲೇವಿ. ೧೮. ೫.) ಅಬ್ರಹಾಮನ ಆಶೀರ್ವಾ
ದವು ಕ್ರಿಸ್ತ ಯೇಸುವಿನಿಂದ ಜನಾಂಗಗಳ ಮೇಲೆ ಬಂದು, ನಾವು ಆತ್ಮದ ವಾಗ್ದತ್ತವನ್ನು ವಿಶ್ವಾಸದ ಮೂಲ
೧೪ ವಾಗಿ ಹೊಂದುವ ಹಾಗೆ, ಕ್ರಿಸ್ತನು ನಮಗೋಸ್ಕರ ಶಾಪವಾಗಿ, ನ್ಯಾಯಪ್ರಮಾಣದ ಶಾಪದೊಳಗಿಂದ
ನಮ್ಮನ್ನು ಕೊಂಡುಕೊಂಡನು; ಹ್ಯಾಗಂದರೆ ಮರದಲ್ಲಿ ತೂಗಾಡುವವರೆಲ್ಲರು ಶಾಪಗ್ರಸ್ತರೆಂದು (ದ್ವಿತೀಯ
ನ್ಯಾ. ೨೧. ೨೩.) ಬರೆದದೆ.
೧೫ ಸಹೋದರರೇ, [2]ಮನುಷ್ಯನ ಪ್ರಕಾರ ಮಾತಾಡುತ್ತೇನೆ, ಸ್ಥಿರ ಮಾಡಲ್ಪಟ್ಟ ಒಡಂಬಡಿಕೆಯನ್ನು ಮನು
೧೬ ಷ್ಯನದಾದರೂ ಯಾರೂ ಹೀನ ಮಾಡುವದೂ ಹೆಚ್ಚು ಮಾಡುವದೂ ಇಲ್ಲ. ಆದರೆ ಅಬ್ರಹಾಮನಿಗೂ,
ಅವನ ಬೀಜಕ್ಕೂ, ವಾಗ್ದತ್ತಗಳು ಹೇಳಲ್ಪಟ್ಟವು; ಅನೇಕರನ್ನು ಕುರಿತಂತೆ ಬೀಜಗಳಿಗೂ ಎಂದಲ್ಲ, ಒಬ್ಬನನ್ನು
೧೭ ಕುರಿತಂತೆ ನಿನ್ನ ಬೀಜಕ್ಕೂ ಎಂದು, (ಉತ್ಪ. ೨೨. ೧೭.) ಹೇಳುತ್ತದೆ; ಅವನು [3]ಕ್ರಿಸ್ತನೇ. [4]ಇದನ್ನು ಹೇ
ಳುತ್ತೇನೆ—ದೇವರಿಂದ ಕ್ರಿಸ್ತನಿಗಾಗಿ ಮೊದಲು ಸ್ಥಿರ ಮಾಡಲ್ಪಟ್ಟ ಒಡಂಬಡಿಕೆಯನ್ನು [5]ನಾನೂರ ಮೂವತ್ತು
ವರುಷಗಳ ಮೇಲೆ ಉಂಟಾದ ನ್ಯಾಯಪ್ರಮಾಣವು, ವಾಗ್ದತ್ತವನ್ನು ತೆಗೆದು ಹಾಕುವದಕ್ಕಾಗಿ, ಅಸ್ಥಿರ
೧೮ ಮಾಡದು. ಯಾಕಂದರೆ ಬಾಧ್ಯವು ನ್ಯಾಯಪ್ರಮಾಣದಿಂದಾದರೆ, ಇನ್ನು [6]ವಾಗ್ದತ್ತದಿಂದಲ್ಲ; ಆದರೆ
ಅಬ್ರಹಾಮನಿಗೆ ವಾಗ್ದತ್ತದಿಂದಲೇ ದೇವರು ದಯ ಮಾಡಿದನು.

ನ್ಯಾಯಪ್ರಮಾಣ ಕೊಡಲ್ಪಟ್ಟ ಗುರಿಯು; ಅದರಿಂದ ಉಂಟಾಗುವ ಫಲವು.

೧೯ ಹಾಗಾದರೆ ನ್ಯಾಯಪ್ರಮಾಣವು ಯಾಕೆ? ವಾಗ್ದತ್ತ ಹೊಂದಿದ ಬೀಜವು ಬರುವ ಪರ್ಯಂತರ,

1. (ರೋಮಾ. ೧. ೧೭. ವಚನದ ವ್ಯಾಖ್ಯಾನ ನೋಡ ಬೇಕು.) ದೇವರ ಸಮುಖದಲ್ಲಿ ನೀತಿವಂತನಾಗಿ ಕಾಣಲ್ಪಡುವದಕ್ಕೆ ವಿಶ್ವಾಸವೇ ಅವಶ್ಯವು. ನ್ಯಾಯಪ್ರಮಾಣವು ಕರ್ಮಾನುಷ್ಠಾನವನ್ನು ಮಾತ್ರ ಆಜ್ಞಾಪಿಸುವದರಿಂದ, ವಿಶ್ವಾಸವೆಂಬ ಮನೋಧರ್ಮವನ್ನು ತೊಲಗಿಸುತ್ತದೆ. ಆದದರಿಂದ ನ್ಯಾಯಪ್ರಮಾಣವು ಮನುಷ್ಯನನ್ನು ನೀತಿವಂತನಾಗ ಮಾಡದೆ ಶಾಪಕ್ಕೊಳಗಾಗ ಮಾಡುವದು. ವಿಶ್ವಾಸದ ನಾಯಕನೂ, ಸುವಾರ್ತೆಯ ಸಾರವೂ ಆಗಿರುವ ಕ್ರಿಸ್ತನು ಆ ಶಾಪವನ್ನು ಹೊತ್ತು ಕೊಂಡು ಅದನ್ನು ತನ್ನ ಪುಣ್ಯಮರಣದಿಂದ ನಿವರ್ತಿ ಮಾಡಿದ ಕಾರಣ, ಆತನನ್ನು ಭಕ್ತಿ ವಿಶ್ವಾಸದಿಂದ ಹೊಂದಿ ಕೊಳ್ಳುವವರೆಲ್ಲರನ್ನು ಆ ಶಾಪ ವಿಮುಕ್ತರಾಗ ಮಾಡಿ, ಅವರಿಗೆ ವಿಶ್ವಾಸಿಯಾದ ಅಬ್ರಹಾಮನಿಗೆ ವಾಗ್ದತ್ತ ಮಾಡಿದ ಆಶೀರ್ವಾದವನ್ನು ಕೊಡುವನು. (೧೩, ೧೪. ವ.) ಯೆಹೂದ್ಯರು ಜನಾಂಗಗಳವರು ಆದ ಎಲ್ಲರೂ ಭೇದಾಭೇದವಿಲ್ಲದೆ ಹೊಂದುವ ಆತ್ಮನೇ ಈ ಆಶೀರ್ವಾದವು. (೨. ವ.)

2. ಮನುಷ್ಯರಲ್ಲಿ ಸಾಧಾರಣವಾಗಿ ನಡಿಯುವ ಒಂದು ವಿಷಯದ ಹಾಗೆ ನೋಡಿದರೂ ಈ ಸತ್ಯವು ತೋರುತ್ತದೆ ಎಂಬುವದೇ ಇದರ ತಾತ್ಪರ್ಯವು.

3. ಕೃಪೆಯುಳ್ಳ ದೇವರು ತನ್ನ ದಾಸನಾದ ಅಬ್ರಹಾಮನಿಗೆ ಕೊಟ್ಟ ವಾಗ್ದತ್ತಗಳಲ್ಲೆಲ್ಲಾ ಸಂತತಿಗಳು ಎಂದು ಬಹುವಚನವಾಗಿರದೆ, ಸಂತತಿ ಎಂದು ಏಕವಚನವಾಗಿದೆ. (ಉತ್ಪ. ೧೨. ೭; ೧೩. ೧೫; ೧೫. ೨೧; ೧೭. ೭—೯; ೨೨. ೧೭, ೧೮.) ಇದಕ್ಕೆ ಇಬ್ರೀಯ ಭಾಷೆಯಲ್ಲಿ ಬೀಜ ಎಂಬ ಪದವು ಪ್ರಯೋಗಿಸಲ್ಪಟ್ಟದೆ. ಜಗದ್ರಕ್ಷಕನನ್ನು ಕುರಿತ ಮೊದಲನೇ ವಾಗ್ದತ್ತದಲ್ಲಿಯೂ ಇದೇ ಪದವು ಪ್ರಯೋಗವಾಗಿದೆ. ಅಬ್ರಹಾಮನ ಬೀಜವೆಂಬುವದು ಅವನ ಸಂತತಿಯಲ್ಲಿ ಹುಟ್ಟಿದವರನ್ನೂ, ಅವನ ಹಾಗೆ ವಿಶ್ವಾಸವುಳ್ಳ ಭಕ್ತರನ್ನೂ ಸೂಚಿಸುತ್ತದೆ. (೨೯. ವ.) ಅಬ್ರಹಾಮನ ಸಂತತಿಯಲ್ಲಿ ಹುಟ್ಟಿದವನೂ, ಅಬ್ರಹಾಮನಿಗೂ, ಅವನಿಗೆ ಸಮಾನ ಭಕ್ತರಾದ ಎಲ್ಲರಿಗೂ ಕರ್ತನೂ ಆಗಿರುವಂಥ ಕ್ರಿಸ್ತನಿಗೆನೇ ಬೀಜವೆಂಬುವ ವಿಶೇಷ ನಾಮವು ಹೇಳಲ್ಪಟ್ಟದೆ. ಒಬ್ಬ ಮನುಷ್ಯನು ಮತ್ತೊಬ್ಬನ ಸಂಗಡ ಮಾಡುವ ಒಡಂಬಡಿಕೆ ದೃಢವಾಗಿರುವದಾದರೆ, ಸರ್ವಶಕ್ತನಾದ ದೇವರು ಅಬ್ರಹಾಮನ ಸಂಗಡಲೂ ಅವನ ಸಂತತಿಯಾದ ಜಗದ್ರಕ್ಷಕನ ಸಂಗಡಲೂ ಮಾಡಿದ ಒಡಂಬಡಿಕೆ ಇನ್ನೆಷ್ಟು ದೃಢವಾಗಿರುವದು.

4. ತರುವಾಯ ಬಂದ ನ್ಯಾಯಪ್ರಮಾಣವು, ಮುಂಚೆ ಇದ್ದ ದೇವರ ವಾಗ್ದತ್ತವನ್ನು ತೆಗೆದು ಹಾಕಲಾರದೆಂದು ಹೇಳ ಬೇಕು.

5. ಅಬ್ರಹಾಮನಿಗೆ ಉಂಟಾದ ದೇವರ ವಾಗ್ದತ್ತವು ಇಸಾಕನು ಹುಟ್ಟುವದಕ್ಕೆ ಮೂವತ್ತು ವರುಷಗಳಿಗೆ ಮುಂಚೆ ಕೊಡಲ್ಪಟ್ಟಿತು. (ಉತ್ಪ. ೧೨. ೧—೩.) ಆದದರಿಂದ ಈ ವಾಗ್ದತ್ತ ಕೊಡಲ್ಪಟ್ಟ ದಿವಸದಿಂದ ಸೀನಾಯಿ ಪರ್ವತದಲ್ಲಿ ನ್ಯಾಯಪ್ರಮಾಣವು ಕೊಡಲ್ಪಟ್ಟ ವರೆಗೂ ನಾನೂರು ಮೂವತ್ತು ವರುಷಗಳು ಗತಿಸಿ ಹೋದವು. (ಅಪೊ. ಕ್ರಿ. ೭. [illegible] ವಚನದ ವ್ಯಾಖ್ಯಾನ ನೋಡ ಬೇಕು.)

6. ಕಾನಾನ್ ದೇಶದ ಉಪಮಾನದಿಂದ ತೋರಿಸಲ್ಪಟ್ಟ ಮೋಕ್ಷಲೋಕವನ್ನು ಸ್ವತಂತ್ರಿಸಿ ಕೊಳ್ಳುವ ಬಾಧ್ಯತೆಯು ನ್ಯಾಯಪ್ರಮಾಣವನ್ನು ಕೈಕೊಳ್ಳುವದರ ಫಲವಾಗಿರದೆ, ವಾಗ್ದತ್ತದ ಈಡೇರಿಕೆಯಿಂದ ಉಂಟಾಗುವ ದೇವರ ವರವಾಗಿದೆ.



[1]ದೂತರ ಮುಖಾಂತರ ಮಧ್ಯಸ್ಥನ ಕೈಯಿಂದ ನೇಮಿಸಲ್ಪಟ್ಟು, ಮೀರುವಿಕೆಗಳ ನಿಮಿತ್ತ [2]ಸೇರಿಸಲ್ಪಟ್ಟಿತ್ತು.
೨೦ ಆದರೆ [3]ಮಧ್ಯಸ್ಥನು ಒಬ್ಬನವನಲ್ಲ, ಆದರೆ ದೇವರು ಒಬ್ಬನೇ.
೨೧ ಹಾಗಾದರೆ ನ್ಯಾಯಪ್ರಮಾಣವು ದೇವರ ವಾಗ್ದತ್ತಗಳಿಗೆ [4]ವಿರೋಧವೋ? ಆಗದು; ಬದುಕಿಸ ಬಲವುಳ್ಳ
ನ್ಯಾಯಪ್ರಮಾಣವು ಕೊಡಲ್ಪಟ್ಟಿದ್ದರೆ, ನಿಜವಾಗಿ ನ್ಯಾಯಪ್ರಮಾಣದಿಂದ ನೀತಿ ಉಂಟಾಗಿರುವದು.
೨೨ ಆದರೆ ಯೇಸು ಕ್ರಿಸ್ತನ ವಿಶ್ವಾಸದಿಂದಾದ ವಾಗ್ದತ್ತವು ವಿಶ್ವಾಸಿಸುವವರಿಗೆ ಕೊಡಲ್ಪಡುವ ಹಾಗೆ, ಬರಹವು
೨೩ ಎಲ್ಲವನ್ನು ಏಕವಾಗಿ ಪಾಪದ ಕೆಳಗೆ [5]ಮುಚ್ಚಿ ಹಾಕಿತು. ಆದರೆ ವಿಶ್ವಾಸವು ಬರುವದಕ್ಕಿಂತ ಮುಂಚೆ, ಪ್ರ
ಕಟವಾಗಲಿರುವ [6]ವಿಶ್ವಾಸಕ್ಕಾಗಿ ಮುಚ್ಚಲ್ಪಟ್ಟು, ನ್ಯಾಯಪ್ರಮಾಣದ ಕೆಳಗೆ ಕಾಯಲ್ಪಡುವವರಾಗಿದ್ದೆವು.
೨೪ ಹೀಗಿರಲಾಗಿ ನಾವು ವಿಶ್ವಾಸದಿಂದ ನೀತಿನಿರ್ಣಯ ಪಡುವ ಹಾಗೆ, ನ್ಯಾಯಪ್ರಮಾಣವು ನಮ್ಮನ್ನು ಕ್ರಿಸ್ತ
೨೫ ನಿಗೆ ತರುವ [7]ಉಪಾಧ್ಯನಾಗಿತ್ತು. ಆದರೆ ವಿಶ್ವಾಸವು ಬಂದ ಮೇಲೆ, ಇನ್ನೂ ಉಪಾಧ್ಯನ ಕೆಳಗೆ ಇರೆವು.
೨೬ ಯಾಕಂದರೆ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದ ಮೂಲವಾಗಿ ಎಲ್ಲರು ದೇವರ [8]ಮಕ್ಕಳಾಗಿದ್ದೀರಿ.
೨೭, ೨೮ ಹ್ಯಾಗಂದರೆ ಕ್ರಿಸ್ತನಿಗಾಗಿ ಸ್ನಾನ ಹೊಂದಿದವರಷ್ಟು ಕ್ರಿಸ್ತನನ್ನು [9]ಧರಿಸಿ ಕೊಂಡಿರಿ. ಯೆಹೂದ್ಯನೂ
ಇಲ್ಲ, ಗ್ರೇಕನೂ ಇಲ್ಲ, ದಾಸನೂ ಇಲ್ಲ, ಸ್ವತಂತ್ರನೂ ಇಲ್ಲ, ಗಂಡೂ ಇಲ್ಲ, ಹೆಣ್ಣೂ ಇಲ್ಲ; ಯಾಕಂದರೆ
೨೯ ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ [10]ಒಬ್ಬನೇ ಆಗಿದ್ದೀರಿ. ಮತ್ತು ನೀವು ಕ್ರಿಸ್ತನವರಾದರೆ, ಅಬ್ರಹಾಮನ
ಬೀಜವೂ, ವಾಗ್ದತ್ತದ ಪ್ರಕಾರ ಬಾಧ್ಯಸ್ಥರೂ, ಆಗಿದ್ದೀರಿ.

1. ನ್ಯಾಯಪ್ರಮಾಣವು ಕೊಡಲ್ಪಟ್ಟ ವಿಷಯದಲ್ಲಿ ಮೋಶೆಯು ಮಧ್ಯಸ್ಥನಾಗಿಯೂ, ದೇವದೂತರು ಊಳಿಗದವರಾಗಿಯೂ ಇದ್ದರು. (ದ್ವಿತೀಯ ನ್ಯಾ. ೩೩. ೨. ಅಪೊ. ಕ್ರಿ. ೭. ೩೮, ೪೪, ೫೩. ಇಬ್ರಿ. ೨. ೨; ೩. ೨. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

2. ಪಾಪವು ಮಹಾ ಅಕ್ರಮವಾದದ್ದೆಂದು ತೋರ ತಕ್ಕದ್ದಾಗಿ ನ್ಯಾಯಪ್ರಮಾಣವು ಕೂಡಿಸಿ ಕೊಡಲ್ಪಟ್ಟಿತು. (ರೋಮಾ. ೫. ೨೦. ವಚನದ ವ್ಯಾಖ್ಯಾನದಲ್ಲಿ ನೋಡ ಬೇಕು.) ಮೋಶೆಯ ನ್ಯಾಯಪ್ರಮಾಣಕ್ಕೂ ಸುವಾರ್ತೆಗೂ ಇರುವ ವ್ಯತ್ಯಾಸವನ್ನು ತೋರಿಸಿ, ನ್ಯಾಯಪ್ರಮಾಣವು ಮಾರ್ಪಡುವ ಸ್ವಭಾವವುಳ್ಳದ್ದೆಂದು ತೋರಿಸುವದೇ ಪೌಲನ ಗುರಿಯಾಗಿತ್ತೆಂದು ಕಾಣುತ್ತದೆ.

3. ಮಧ್ಯಸ್ಥನೆಂದು ಹೇಳುವಾಗಲೇ ಉಭಯ ಪಕ್ಷದವರನ್ನು ಸೂಚಿಸುತ್ತದೆ. ಮಧ್ಯಸ್ಥನಾಗಿದ್ದ ಮೋಶೆಯು ಮಹಾ ದೇವರಾದ ಯೆಹೋವನಿಗೂ ಇಸ್ರಯೇಲ್ಯರಿಗೂ ಮಧ್ಯಸ್ಥನಾಗಿದ್ದದರಿಂದ ಅವನು ಒಬ್ಬನವನಲ್ಲ. ಅಬ್ರಹಾಮನಿಗೆ ವಾಗ್ದತ್ತ ಮಾಡಿದ ದೇವರು ಏಕಸ್ವಯಾಧಿಪತಿಯಾಗಿ ಇರುವಂಥವನೇ. ದೇವದೂತರ ಮೂಲಕವಾಗಿ ಮಧ್ಯಸ್ಥನ ಕೈಯಿಂದ ಕೊಡಲ್ಪಟ್ಟ ಒಡಂಬಡಿಕೆಗಿಂತ, ಒಬ್ಬನೇ ದೇವರಾಗಿರುವ ಪರಾತ್ಪರನಿಂದ ಮಾಡಲ್ಪಟ್ಟ ವಾಗ್ದತ್ತವು ಬಹಳ ಶ್ರೇಷ್ಠವಾದದ್ದೆಂಬುವದಕ್ಕೆ ಸಂದೇಹವಿಲ್ಲ. ಸುವಾರ್ತೆಯು ಸಹ ಮಧ್ಯಸ್ಥನ ಮೂಲಕವಾಗಿ ಕೊಡಲ್ಪಡಲಿಲ್ಲವೋ? ಅಂದರೆ, ಆ ಏಕ ಮಧ್ಯಸ್ಥನಾದ ಕ್ರಿಸ್ತನು ತಾನೇ ಮಹಾ ದೇವರಾಗಿದ್ದಾನೆಂದು ತಿಳಿಯ ತಕ್ಕದ್ದು. (ಇಬ್ರಿ. ೨. ೫; ೬. ೩—೬.)

4. ನ್ಯಾಯಪ್ರಮಾಣವೂ ವಾಗ್ದತ್ತವೂ ಒಬ್ಬನೇ ದೇವರ ಸಾಧನಗಳಾಗಿರುವದರಿಂದ ಒಂದಕ್ಕೊಂದು ವಿಕಲ್ಪವಾದದ್ದಲ್ಲ. ನ್ಯಾಯಪ್ರಮಾಣವು ವಾಗ್ದತ್ತವು ಈಡೇರುವದಕ್ಕೆ ಅನುಕೂಲವಾಗಿದೆ. ಅದು ಸಮಸ್ತರನ್ನೂ ಪಾಪವೆಂಬ ಸೆರೆಯಲ್ಲಿ ಮುಚ್ಚಿ, ಅವರ ಅಪರಾಧವನ್ನೂ ದೌರ್ಭಾಗ್ಯವನ್ನೂ ಅವರಿಗೆ ಗ್ರಹಿಸ ಮಾಡುವದರಿಂದ, ಅವರು ರಕ್ಷಕನಾದ ಕ್ರಿಸ್ತನ ಬಳಿಗೆ ಓಡಿ, ಆತನನ್ನು ಹೊಂದಿದ ವಿಶ್ವಾಸದಿಂದ ದೇವರು ವಾಗ್ದತ್ತ ಮಾಡಿದ ಆಶೀರ್ವಾದಗಳನ್ನು ಹೊಂದುವದಕ್ಕೆ ಹೇತುವೆಯಾಗುತ್ತದೆ. (ರೋಮಾ. ೧೧. ೩೨. ವಚನದ ವ್ಯಾಖ್ಯಾನ ನೋಡ ಬೇಕು.)

5. (೨೩. ವ.) ಪಾಪದಲ್ಲಿ ಸತ್ತ ಮನುಷ್ಯರಿಗೆ ನ್ಯಾಯಪ್ರಮಾಣದಿಂದ ಜೀವವು ಬಾರದ ಕಾರಣ ಅದು ಎಲ್ಲರನ್ನೂ ಪಾಪದ ಸೆರೆಯಲ್ಲಿ ಮುಚ್ಚಿ ಬಿಟ್ಟಿತು. ವಿಮೋಚಕನಾದ ಕ್ರಿಸ್ತನನ್ನು ಶರಣು ಹೊಗುವವರು ಆ ಸೆರೆಯಿಂದ ಬಿಡುಗಡೆ ಹೊಂದುತ್ತಾರೆ.

6. ಇದು ವಿಶ್ವಾಸದಿಂದ ಬರುವದೆಂದು ಸುವಾರ್ತೆಯ ಪ್ರಮಾಣದಲ್ಲಿ ತೋರಿಸಿರುವ ರಕ್ಷಣೆಯನ್ನು ಕುರಿತದ್ದು. (೨೫. ವ. ಮಾರ್ಕ. ೧. ೧೫.)

7. ಉಪಾಧ್ಯನೆಂಬುವದು ಮೂಲ ಭಾಷೆಯಲ್ಲಿ ತನ್ನ ವಶಕ್ಕೆ ಒಪ್ಪಿಸಿರುವ ಒಂದು ಕುಟುಂಬದ ಮಕ್ಕಳನ್ನು ಸಾಲೆಗೆ ಕರಕೊಂಡು ಹೋಗಿ ಭದ್ರವಾಗಿ ಕಾಯುವ ಒಬ್ಬ ದಾಸನನ್ನು ಸೂಚಿಸುತ್ತದೆ. ಹಾಗೆಯೇ ನ್ಯಾಯಪ್ರಮಾಣವು ಸಹ ತನ್ನ ಬೋಧನೆಗಳಿಂದಲೂ ಖಂಡನೆಗಳಿಂದಲೂ ಮನುಷ್ಯರ ಪಾಪಗಳನ್ನು ಅವರಿಗೆ ಗ್ರಹಿಸ ಮಾಡಿ, (ರೋಮಾ. ೭. ೭.) ಕಡೆಯಲ್ಲಿ ಅವರನ್ನು ಕ್ರಿಸ್ತನ ಸಾಲೆಗೆ ನಡಿಸಿ, ಅವರು ಆತನಿಂದ ರಕ್ಷಣೆ ಹೊಂದ ಮಾಡುತ್ತದೆ.

8. ಖಂಡನೆಗೊಳಗಾಗಿರುವ ಮಕ್ಕಳಾಗಿರದೆ, ಪರಿಪಕ್ವ ಹೊಂದಿದ ಮಕ್ಕಳಾಗಿದ್ದೀರಿ. ವಿಶ್ವಾಸದಿಂದ ಕ್ರಿಸ್ತನ ಸಮ್ಮಂಧಿಕರಾದವರು ಪಕ್ವವಾದ ಮಕ್ಕಳಾಗಿ ಸ್ವಾಧೀನ ಹೊಂದುತ್ತಾರೆ.

9. ಈ ಭಾಗ್ಯವನ್ನು ಹೊಂದ ತಕ್ಕ ಯತ್ನವಾಗಿರುವ ವಿಶ್ವಾಸಕ್ಕೆ ಸ್ನಾನವು ಗುರುತಾಗಿಯೂ ಮುದ್ರೆಯಾಗಿಯೂ ಇರುತ್ತದೆ. ಅದನ್ನು ತಕ್ಕ ವಿಶ್ವಾಸದಿಂದ ಹೊಂದಿದವರೆಲ್ಲರೂ ಕ್ರಿಸ್ತನೆಂಬ ದಿವ್ಯಾಲಂಕಾರ ಹೊಂದಿದವರಾಗಿದ್ದಾರೆ. (ರೋಮಾ. ೧೩. ೧೪. ವಚನದ ವ್ಯಾಖ್ಯಾನ ನೋಡ ಬೇಕು.)

10. ಕ್ರಿಸ್ತನನ್ನು ಭೂಷಣವಾಗಿ ಧರಿಸಿ ಕೊಂಡವರೆಲ್ಲರೂ, ದೇಶ, ವರ್ಣ, ಅಂತಸ್ತು ಎಂಬ ಭೇದವಿಲ್ಲದೆ (೧—೮. ವ.) ಆತನಲ್ಲಿ ಒಂದಾಗಿ, ಆತನು ಕೊಟ್ಟ ಮಹಾ ವಾಗ್ದತ್ತದ ಆಶೀರ್ವಾದಗಳಿಗೆ ಬಾಧ್ಯಸ್ಥರಾಗುತ್ತಾರೆ. (೨೯. ವ.)

4. ಇದನ್ನು ಹೇಳುತ್ತೇನೆ—ಬಾಧ್ಯಸ್ಥನು [1]ಬಾಲಕನಾಗಿರುವ ಕಾಲವಷ್ಟು, ಎಲ್ಲಕ್ಕೆ ಅಧಿಕಾರಿಯಾಗಿದ್ದರೂ,
೨ ದಾಸನಿಗಿಂತ ವಿಶೇಷನಲ್ಲ; ಆದರೆ ತಂದೆ ಮುನ್ನೇಮಿಸಿದ ಕಾಲದ ವರೆಗೆ, [2]ಯಜಮಾನರಿಗೂ ಉಗ್ರಾಣ
೩ ದವರಿಗೂ ಒಳಗಾಗಿದ್ದಾನೆ. ಹಾಗೆಯೇ [3]ನಾವು ಬಾಲಕರಾಗಿರುವಾಗ, ಲೋಕದ [4]ಸೂತ್ರಗಳಿಗೆ ದಾಸ
೪ ರಾಗಿ ಒಳಗಾಗಿದ್ದೆವು. ಆದರೆ [5]ಕಾಲದ ಸಂಪೂರ್ಣತೆಯು ಬಂದಾಗ, ನಾವು [6]ಪುತ್ರಸ್ವೀಕಾರ ಹೊಂದುವ
೫ ಹಾಗೆ, ನ್ಯಾಯಪ್ರಮಾಣಕ್ಕೊಳಗಾದವರನ್ನು ಕೊಂಡು ಕೊಳ್ಳುವದಕ್ಕೆ, ದೇವರು ತನ್ನ ಮಗನನ್ನು [7]ಸ್ತ್ರೀ
೬ ಯಿಂದ ಹುಟ್ಟಿದವನಾಗಿಯೂ, ನ್ಯಾಯಪ್ರಮಾಣಕ್ಕೊಳಗಾದವನಾಗಿಯೂ, ಕಳುಹಿಸಿದನು. ಮತ್ತು
ನೀವು ಮಕ್ಕಳಾಗಿರುವದರಿಂದ, ದೇವರು ತನ್ನ ಮಗನ ಆತ್ಮವನ್ನು ನಿಮ್ಮ ಹೃದಯಗಳೊಳಗೆ ಕಳುಹಿಸಿದನು—
೭ ಅಪ್ಪಾ, ತಂದೆಯೇ, ಎಂದು ಕೂಗುವಂಥಾದ್ದನ್ನೇ. ಹೀಗಿರಲಾಗಿ ನೀನು ಇನ್ನು ದಾಸನಲ್ಲ, ಮಗನೇ;
ಮಗನಾದರೆ, ಕ್ರಿಸ್ತನ ಮುಖಾಂತರ ದೇವರಿಗೆ ಬಾಧ್ಯಸ್ಥನೂ ಆಗಿದ್ದೀ.

ವಿಗ್ರಹಾರಾಧನೆಗೆ ತೊಲಗಿದವರು ನ್ಯಾಯಪ್ರಮಾಣದ ದಾಸತ್ವಕ್ಕೆ ಒಳಗಾಗುವದು
ತಕ್ಕದ್ದಲ್ಲವೆಂದು ತೋರಿಸುವ ಕಟ್ಟಳೆಗಳು.

೮, ೯ ಆಗ ದೇವರನ್ನರಿಯದೆ, [8]ಸ್ವಭಾವವಾಗಿ ದೇವರುಗಳಲ್ಲದವರನ್ನು ಸೇವಿಸಿದಿರಿ. ಆದರೆ ಈಗ ದೇವರನ್ನ
ರಿತು, ವಿಶೇಷವಾಗಿ [9]ದೇವರಿಂದ ಅರಿಯಲ್ಪಟ್ಟು, ಮತ್ತು ಬಲಹೀನವಾದ [10]ಬಡ ಸೂತ್ರಗಳ ಹತ್ತರ,

1. ಮೂರನೇ ಸಂಧಿಯ ಕಡೇ ವಚನದಲ್ಲಿ ವಾಗ್ದತ್ತದ ಬಾಧ್ಯಸ್ಥನನ್ನು ಕುರಿತು ಹೇಳಿ ಇದೆ. ಅಂಥಾ ಬಾಧ್ಯಸ್ಥನು ಎಲ್ಲಾ ಆಸ್ತಿಗೆ ಅಧಿಕಾರಿಯಾಗಿದ್ದರೂ ಬಾಲಕನಾಗಿರುವಷ್ಟು ಕಾಲವೂ, ನಿರ್ಣಯದ ಪ್ರಕಾರ ಆಸ್ತಿಯನ್ನು ಸ್ವತಂತ್ರಿಸಿ ಕೊಳ್ಳ ಶಕ್ತಿ ಇಲ್ಲದೆ, ದಾಸನ ಹಾಗೆ ಬೇರೊಬ್ಬರ ಅಧಿಕಾರಕ್ಕೆ ಒಳಪಟ್ಟವನಾಗಿರುತ್ತಾನೆ.

2. ಯಜಮಾನರೆಂಬುವದು ಆಳುಗಳನ್ನು ಕಾಯುವಂಥವರನ್ನೂ, ಉಗ್ರಾಣದವರೆಂಬುವದು ಆಸ್ತಿ ಸೊತ್ತುಗಳನ್ನು ಕಾಪಾಡುವಂಥವರನ್ನೂ ಸೂಚಿಸುತ್ತದೆ.

3. ನಾವು ಎಂಬುವದು ಯೆಹೂದ್ಯರು ಜನಾಂಗಗಳವರು ಆದ ಸಮಸ್ತರನ್ನೂ ಕುರಿತದ್ದು.

4. ಸೂತ್ರಗಳು ಎಂಬುವದು ಮತ್ತೊಬ್ಬರ ಅಧಿಕಾರಕ್ಕೊಳಪಟ್ಟಿರುವ ಬಾಲಕರ ಅಲ್ಪ ತಿಳುವಿಕೆಯನ್ನೂ (೧, ೯. ವ. ಕೊಲೊ. ೨. ೨೦.) ಭೂಸಮ್ಮಂಥವಾದ ಮಾರ್ಪಡ ತಕ್ಕಂಥ ಆಚರಣೆಗಳನ್ನೂ ಸೂಚಿಸುತ್ತದೆ. (೯. ವ.) ಆದದರಿಂದ ಈ ವಿಷಯಗಳು ಕ್ರಿಸ್ತನ ವಿಶ್ವಾಸದಿಂದ ಉಂಟಾಗುವ ರಕ್ಷಣೆಯ ಶ್ರೇಷ್ಠತ್ವಕ್ಕೆ ಬಹಳ ಕಡಿಮೆಯಾದವುಗಳಾಗಿವೆ. (ಕೊಲೊ. ೨. ೮. ಇಬ್ರೀ. ೯. ೧.) ಯೆಹೂದ್ಯರು ಆಚರಣೆಗಳನ್ನೂ, ಜನಾಂಗಗಳವರು ಪಂಚಭೂತಗಳನ್ನೂ ದೇವರ ಹಾಗೆ ಭಾವಿಸಿ ಆರಾಧಿಸುತ್ತಾ ಬಂದದರಿಂದ ಅವರು ಅವುಗಳಿಗೆ ದಾಸರಾಗಿಯೇ ಇದ್ದರು.

5. ಬಾಲಕನು ಆಸ್ತಿಯನ್ನು ಹೊಂದುವದಕ್ಕೆ ತಂದೆಯು ನೇಮಿಸಿದ ಕಾಲವು ಈಡೇರುವ ಪ್ರಕಾರ, ದೇವರು ಅನಾದಿಯಲ್ಲಿಯೇ ನಿರ್ಣಯಿಸಿದ್ದೂ, ಪ್ರವಾದಿಗಳ ಮೂಲಕವಾಗಿ ಪ್ರಕಟ ಮಾಡಿದ್ದೂ, ಈ ಲೋಕದವರು ತಮ್ಮ ಸ್ವಪ್ರಯತ್ನದಿಂದ ರಕ್ಷಿಸಲ್ಪಡ ಬಹುದೇನೋ ಎಂದು ಪರೀಕ್ಷಿಸಿ ತಿಳುಕೊಳ್ಳುವದಕ್ಕೆ ಕೊಡಲ್ಪಟ್ಟದ್ದೂ ಆದ ಕಾಲವು ಸಂಪೂರ್ಣವಾದಾಗ ಜಗದ್ರಕ್ಷಕನು ಅವತರಿಸಿದನು. (ಹೊಸ ಒಡಂಬಡಿಕೆಯ ಪೀಠಿಕೆಯಲ್ಲಿ ನೋಡ ಬೇಕು.)

6. (೫—೭. ವಚನಗಳ ವ್ಯಾಖ್ಯಾನವನ್ನು ರೋಮಾ. ೮. ೧೫, ೧೭. ವಚನಗಳ ವ್ಯಾಖ್ಯಾನದಲ್ಲಿ ನೋಡ ಬೇಕು.) ಇದರಲ್ಲಿ ಪರಿಶುದ್ಧಾತ್ಮನು ಕೂಗುತ್ತಾನೆಂದೂ, ರೋಮಾಯರ ಪತ್ರಿಕೆಯಲ್ಲಿ ನಾವು ಕೂಗುತ್ತೇವೆಂದೂ ಹೇಳಿ ಇದೆ. ಕೂಸು ತಂದೆಯ ಹೆಸರನ್ನು ಕಲಿತು ಕೊಂಡು ಹೇಳುವ ಪ್ರಕಾರ ದೇವರ ದಾಸರು ತಮ್ಮ ಪರಮ ತಂದೆಯ ಹೆಸರನ್ನು ಮೊದಲು ಪರಿಶುದ್ಧಾತ್ಮನ ಮೂಲಕವಾಗಿ ಕಲಿತು ಕೊಂಡು, ತರುವಾಯ ಅವರೇ ಆ ಹೆಸರನ್ನು ಕರಿಯುತ್ತಾರೆ.

7. ಕ್ರಿಸ್ತನು ಮನುಷ್ಯಾವತಾರ ಮಾಡಿದ್ದರಿಂದ ದೇವರ ಪ್ರಮಾಣಕ್ಕೆ ವಿಧೇಯನಾಗಿದ್ದನು; ಮತ್ತು ಯೆಹೂದ್ಯ ಸ್ತ್ರೀಯಲ್ಲಿ ಹುಟ್ಟಿ, ಯೆಹೂದ್ಯನಾಗಿದ್ದದರಿಂದ ಮೋಶೆಯ ನ್ಯಾಯಪ್ರಮಾಣಕ್ಕೆ ವಿಧೇಯನಾಗಿದ್ದನು. ಆದ ಕಾರಣ ಆತನ ರಕ್ತದಿಂದಾದ ವಿಮೋಚನೆಯು ಯೆಹೂದ್ಯರು ಜನಾಂಗಗಳವರು ಆದ ಸರ್ವಜನರಿಗೂ ಸಲ್ಲ ತಕ್ಕದ್ದಾಗಿದೆ. ಆತನು ನ್ಯಾಯಪ್ರಮಾಣಕ್ಕೆ ವಿಧೇಯನಾಗಿ, ಅದರ ಶಾಪವನ್ನೂ ದಾಸತ್ವವನ್ನೂ ನಿವರ್ತಿ ಮಾಡಿದ್ದರಿಂದ, ಆತನಲ್ಲಿ ವಿಶ್ವಾಸವಿಡುವವರೆಲ್ಲರೂ ಪುತ್ರಸ್ವೀಕಾರವೆಂಬ ಭಾಗ್ಯವನ್ನು ಹೊಂದುತ್ತಾರೆ.

8. ಅವರು ದೇವರನ್ನು ಅರಿತು ಆತನು ಅನುಗ್ರಹಿಸುವ ಪುತ್ರಸ್ವೀಕಾರವನ್ನು ಹೊಂದದೆ ಇದ್ದ ಕಾಲದಲ್ಲಿ ವಿಗ್ರಹಗಳನ್ನು ದೇವರಂತೆ ಆರಾಧಿಸಿದರು. (೧ ಕೊರಿ. ೮. ೪; ೧೦. ೧೯, ೨೦. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

9. ಕರುಣೆಯುಳ್ಳ ದೇವರು ನಮಗೆ ತನ್ನನ್ನು ಮುಂದಾಗಿ ತಿಳಿಯ ಮಾಡುತ್ತಾನೆ ಹೊರ್ತು, ನಾವು ಆತನನ್ನು ಮುಂದಾಗಿ ತಿಳಿದು ಕೊಳ್ಳುವದಿಲ್ಲ. (೧ ಕೊರಿ. ೮. ೩.)

10. ರಕ್ಷಿಸುವದಕ್ಕೆ ಬಲವಿಲ್ಲದ್ದಾಗಿಯೂ, ಜ್ಞಾನವರಗಳ ವಿಷಯದಲ್ಲಿ ಬರಿದಾಗಿಯೂ ಇರುವ ಮಾರ್ಗಗಳು. (೩. ವ.)



೧೦ ಅವುಗಳನ್ನು ಮತ್ತು [1]ತಿರಿಗಿ ಸೇವಿಸ ಬೇಕೆಂದು, ಯಾಕೆ ತಿರುಗಿ ಕೊಳ್ಳುತ್ತೀರಿ? ದಿವಸಗಳನ್ನೂ, ಮಾಸ
೧೧ ಗಳನ್ನೂ, ಸಮಯಗಳನ್ನೂ, ವರುಷಗಳನ್ನೂ, ಆಚರಿಸುತ್ತೀರಿ. ನಿಮ್ಮಲ್ಲಿ ಸುಮ್ಮನೆ ಕಷ್ಟ ಪಟ್ಟೆನೇನೋ,
ನಿಮಗೋಸ್ಕರ ಭಯ ಪಡುತ್ತೇನೆ.
೧೨ ನಾನೂ ನಿಮ್ಮ ಹಾಗೆ ಇರುವದರಿಂದ ನೀವು [2]ನನ್ನ ಹಾಗೆ ಆಗಿರಿ; ಸಹೋದರರೇ, ನಿಮ್ಮನ್ನು ಬೇಡಿ
೧೩ ಕೊಳ್ಳುತ್ತೇನೆ; ನೀವು ನನಗೇನೂ ಅನ್ಯಾಯ ಮಾಡಲಿಲ್ಲ. ಆದರೆ ಮಾಂಸದ ಬಲಹೀನತ್ವದಿಂದ ಮೊದಲು
೧೪ ನಿಮಗೆ ಸುವಾರ್ತೆ ಪ್ರಸಂಗಿಸಿದೆನೆಂದು ಬಲ್ಲಿರಿ. ಮತ್ತು ನನ್ನ ಮಾಂಸದಲ್ಲಿರುವ ನನ್ನ ಶೋಧನೆಯನ್ನು
ನೀವು ಹೀನೈಸಲಿಲ್ಲ, ಅಸಂಹಿಸಲಿಲ್ಲ, ಆದರೆ ದೇವದೂತನ ಹಾಗೆ, ಕ್ರಿಸ್ತ ಯೇಸುವಿನ ಹಾಗೆ, ನನ್ನನ್ನು ಅಂಗೀ
೧೫ ಕರಿಸಿದಿರಿ; ಹಾಗಾದರೆ, ನಿಮಗೆ ಇದ್ದ ಭಾಗ್ಯವು ಎಲ್ಲಿ? ಸಾಧ್ಯವಾಗಿದ್ದರೆ, ನಿಮ್ಮ ಕಣ್ಣುಗಳನ್ನು ಕಿತ್ತು
೧೬ ತೆಗೆದು, ನನಗೆ ಕೊಡುತ್ತಿದ್ದಿರೆಂದು ನಿಮಗೆ ಸಾಕ್ಷಿ ಕೊಡುತ್ತೇನೆ. ಹೀಗಿರಲಾಗಿ, ನಿಮಗೆ [3]ಸತ್ಯವನ್ನು
ಹೇಳುವದರಿಂದ ನಿಮ್ಮ ಶತ್ರುವಾದೆನೋ?
೧೭ [4]ನಿಮ್ಮ ಮೇಲೆ ಆಸಕ್ತಿ ಪಡುತ್ತಾರೆ, ಆದರೆ ಚನ್ನಾಗಿ ಅಲ್ಲ, ನೀವು ಅವರ ಮೇಲೆ ಆಸಕ್ತಿ ಪಡುವ ಹಾಗೆ,
೧೮ ನಿಮ್ಮನ್ನು ಹೊರಗೆ ಹಾಕ ಇಚ್ಛೈಸುತ್ತಾರೆ. ಆದರೆ ನಾನು ನಿಮ್ಮ ಹತ್ತರ ಇರುವಲ್ಲಿ ಮಾತ್ರವಲ್ಲ, ಯಾ
೧೯ ವಾಗಲೂ ಒಳ್ಳೇದರಲ್ಲಿ ಆಸಕ್ತಿ ಪಡುವದು ಒಳ್ಳೇದು. ನನ್ನ ಮಕ್ಕಳೇ, [5]ಕ್ರಿಸ್ತನು ನಿಮ್ಮಲ್ಲಿ ರೂಪವಾಗುವ
೨೦ ಮಟ್ಟಿಗೂ ತಿರಿಗಿ ನಿಮಗೋಸ್ಕರ ಪ್ರಸವವೇದನೆ ಪಡುತ್ತೇನೆ. ಆದರೆ ಈಗಲೇ ನಿಮ್ಮ ಬಳಿಯಲ್ಲಿದ್ದು, ನನ್ನ
ಶಬ್ದವನ್ನು [6]ಬದಲು ಮಾಡ ಇಚ್ಛೈಸೇನು; ಯಾಕಂದರೆ ನಿಮ್ಮ [7]ವಿಷಯವಾಗಿ ಮಾರ್ಗ ಕಾಣದೆ ಇದ್ದೇನೆ.

1. ಯೆಹೂದ್ಯರ ಆಚಾರಗಳನ್ನು ಅನುಸರಿಸಿ ನಡೆಯುವದು, (೧೦. ವ.) ಜನಾಂಗಗಳವರು ಆದಿಯಲ್ಲಿದ್ದ ದಾಸತ್ವದ ಸ್ಥಿತಿಗೆ ಸಮವಾಗಿರುತ್ತದೆ. ಏಳು ದಿವಸಗಳಲ್ಲಿ ಒಂದು ದಿವಸವನ್ನು ಪರಿಶುದ್ಧವಾಗಿ ಆಚರಿಸುವದು ಸನ್ಮಾರ್ಗಪ್ರಮಾಣಕ್ಕೆ ಶೇರುವದರಿಂದ ಅದನ್ನು ಅವಶ್ಯವಾಗಿ ಕೈಕೊಳ್ಳ ಬೇಕು. ಆದರೆ ಬೇರೆ ದಿವಸಗಳನ್ನೂ ನಕ್ಷತ್ರಗಳನ್ನೂ ನೋಡುವವರು, ಕ್ರಿಸ್ತನಿಂದುಂಟಾದ ಸ್ವಾಧೀನವನ್ನು ಅಲಕ್ಷ್ಯ ಮಾಡಿ, ದಿವಸಗಳನ್ನೂ ಮಾಸಗಳನ್ನೂ ಆಚರಿಸುತ್ತಿದ್ದ ಯೆಹೂದ್ಯರಿಗೆ ಸಮಾನವಾಗಿದ್ದಾರೆ.

2. ಯೆಹೂದ್ಯನಾದ ನಾನು ಯೆಹೂದ್ಯರ ಆಚಾರಗಳನ್ನು ತಳ್ಳಿ ಜನಾಂಗಗಳವರಾದ ನಿಮ್ಮ ಹಾಗೆ ಆದ ಪ್ರಕಾರ, ನೀವು ಸಹ ಈ ವಿಷಯದಲ್ಲಿ ನನ್ನ ಹಾಗೆ ಆಗಿರಿ ಎಂದು ಆಜ್ಞಾಪಿಸುವದೇ ಪೌಲನ ಅಭಿಪ್ರಾಯವೆಂದು ಅನೇಕ ವಿದ್ವಾಂಸರು ನೆನಸುತ್ತಾರೆ. (೧ ಕೊರಿ. ೯. ೨೧.) ಆದರೆ ೧೩—೧೬. ವಚನಗಳನ್ನೂ ೧ ಅರ. ೨೨. ೪. ವಚನವನ್ನೂ ಸರಿ ನೋಡುವಾಗ ಬೇರೆ ವಿಧವಾಗಿ ಅರ್ಥ ಮಾಡ ಬಹುದು. ನನ್ನ ಮನಸ್ಸು ನಿಮ್ಮ ಮನಸ್ಸಿನ ಸಂಗಡ ಹೊಂದಿಕೆಯಾಗಿರುವ ಪ್ರಕಾರ, ನಿಮ್ಮ ಮನಸ್ಸು ಸಹ ನನ್ನ ಮನಸ್ಸಿನ ಸಂಗಡ ಹೊಂದಿಕೆಯಾಗಿರ ಬೇಕು. ನನಗೆ ಉಂಟಾದ ಅನ್ಯಾಯದ ವಿಷಯ ನಾನು ಕೊರತೆ ಏನೂ ಹೇಳುವದಿಲ್ಲ. ಮೊದಲನೇ ಸಾರಿ ನಾನು ನಿಮ್ಮ ಬಳಿಯಲ್ಲಿ ಶರೀರದ ಬಲಹೀನತ್ವದಿಂದ ಬಂದು ನಿಮಗೆ ಪ್ರಸಂಗಿಸಿದಾಗ, ಅದಕ್ಕಾಗಿ ನೀವು ನನ್ನನ್ನು ಅಲಕ್ಷ್ಯ ಮಾಡದೆ, ನನ್ನ ಜೀವವನ್ನು ನಿಮ್ಮ ಜೀವದ ಹಾಗೆ ಎಣಿಸಿ, ಅದನ್ನು ಕಾಪಾಡುವದಕ್ಕೆ ಬಹಳ ಪ್ರಯಾಸಪಟ್ಟಿರಿ. ಆಗ ನಿಮಗುಂಟಾಗಿದ್ದ ಆನಂದಭಾಗ್ಯವು ಎಂಥಾದ್ದಾಗಿತ್ತೋ ಎಂಬ ಅಭಿಪ್ರಾಯವಾಗಿ ಪೌಲನು ಈ ವಚನಗಳನ್ನು ಬರೆದಿರುವನೆಂದು ತೋರುತ್ತದೆ.

3. ನಿಮ್ಮ ಸ್ವಂತ ಪ್ರಯೋಜನಕ್ಕಾಗಿ ನಿಮ್ಮ ತಪ್ಪುಗಳನ್ನು ಎತ್ತಿ ತೋರಿಸಿ, ಕಳ್ಳಬೋಧಕರಿಗೆ ತೊಲಗಿ ಹೋಗುವ ಹಾಗೆ ನಿಮ್ಮನ್ನು ಎಚ್ಚರಿಸಿದ್ದು ಮಿತ್ರತ್ವವೇ ಹೊರ್ತು ಶತ್ರುತ್ವವಾಗಲಾರದು. (ಸಾಮತಿ. ೨೭. ೬.) "ಯಥಾರ್ಥವಾದಿ ಲೋಕವಿರೋಧಿ" ಎಂಬಂತೆ ನನ್ನ ಕಾರ್ಯವೂ ಇರುತ್ತದೆ ಎಂಬದಾಗಿ ಹೇಳುತ್ತಾನೆ.

4. ಯೆಹೂದ್ಯ ಕಳ್ಳಬೋಧಕರು ಗಲಾತ್ಯ ಸಭೆಯವರ ಮೇಲೆ ಆಸಕ್ತಿ ಪಟ್ಟು ತಂತ್ರವಾಗಿ ನಡೆದರು; ಪೌಲನ ಹಾಗೆ ಯಥಾರ್ಥವಾಗಿ ನಡಿಯಲಿಲ್ಲ. ಅವರು ಗಲಾತ್ಯರನ್ನು ಮಾಯ ಬಲೆಯಲ್ಲಿ ಶಿಕ್ಕಿಸಿ, ಅವರನ್ನು ತಮ್ಮ ಇಷ್ಟದ ಪ್ರಕಾರ ನಡಿಸ ಯತ್ನಯಿಸಿದರು. ಅವರು ಯಾವಾಗಲೂ ಯಥಾರ್ಥವುಳ್ಳವರಾಗಿದ್ದರೆ, (೧೮. ವ.) ಅವರನ್ನು ಅನುಸರಿಸುವದು ತಕ್ಕದ್ದು. ಹಾಗಿಲ್ಲದ ಪಕ್ಷದಲ್ಲಿ ಗಲಾತ್ಯರು ಅವರ ಕಕ್ಷಿಗೆ ಶೇರಿ, ಅವರ ಕಳ್ಳ ಬೋಧನೆಗೆ ಅನುಸರಣೆಯಾಗಿ ನಡಿಯುವದು ಮೋಸ.

5. ಇದು ಉತ್ತಮ ಬೋಧಕರ ಲಕ್ಷಣವು. ಅವರು ತಮ್ಮ ಶಿಷ್ಯರನ್ನು ತಾವು ಹೆತ್ತ ಸ್ವಂತ ಮಕ್ಕಳಂತೆ ಭಾವಿಸುವರು. (ಯೋಹಾ. ೧೩. ೩೩. ೧ ಕೊರಿ. ೪. ೧೫. ೧ ಥೆಸ್ಸ. ೨. ೭.) ಪರಮ ಪುರುಷನಾದ ಕ್ರಿಸ್ತನು ಅವರೊಳಗೆ ಹುಟ್ಟಿ ಪೂರ್ಣ ರೂಪವಾಗುವ ಮಟ್ಟಿಗೂ, ಗರ್ಭವೇದನೆ ಪಡುವವರ ಹಾಗೆ ಬಹಳ ಕಷ್ಟ ಪಡುವರು. (ಎಫೆ. ೩. ೧೭.) ಉತ್ತಮ ಬೋಧಕರು ತಮ್ಮ ಸ್ವರೂಪವನ್ನಲ್ಲ, ತಮ್ಮ ಕರ್ತನ ಸ್ವರೂಪವು ಎಲ್ಲರಲ್ಲಿಯೂ ಪ್ರಕಟವಾಗುವ ಹಾಗೆ ಆಶಿಸುವರು.

6. ಅಪರಾಧ ಹೊರಿಸುವ ವಿಧವನ್ನು ಬಿಟ್ಟು, ಮೆಚ್ಚಿಕೆಯಾಗಿ ಮಾತಾಡುವದಕ್ಕೆ ನನಗೆ ಅಪೇಕ್ಷೆ ಉಂಟು, ಅನ್ನುತ್ತಾನೆ.

7. ನಿಮ್ಮ ವಿಷಯ ಏನು ಮಾಡ ಬೇಕೋ ಎಂದು ನಾನು ಸಂದೇಹವಾಗಿರುವದರಿಂದ ಬಹಳ ಚಿಂತೆಯುಳ್ಳವನಾಗಿದ್ದೇನೆ, ಅನ್ನುತ್ತಾನೆ.

ಹಳೇ ಒಡಂಬಡಿಕೆ ನಿವರ್ತಿಯಾಗಿ ಹೊಸ ಒಡಂಬಡಿಕೆ ಸ್ಥಾಪಿಸಲ್ಪಡುವದೆಂಬುವದನ್ನು
ತೋರಿಸುವ ಉಪಮಾನವು.

೨೧ [1]ನ್ಯಾಯಪ್ರಮಾಣಕ್ಕೊಳಗಾಗಿರ ಮನಸ್ಸುಳ್ಳವರೇ, [2]ನನಗೆ ಹೇಳಿರಿ. ನ್ಯಾಯಪ್ರಮಾಣವನ್ನು ಕೇಳುವದಿ
೨೨ ಲ್ಲವೋ? ಏನಂದರೆ ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು; ದಾಸಿಯಿಂದ ಒಬ್ಬನೂ, ಸ್ವತಂತ್ರಳಿಂದ
೨೩ ಒಬ್ಬನೂ, ಎಂದು ಬರೆದದೆ. ಆದರೆ ದಾಸಿಯಿಂದಾದವನು ಮಾಂಸದ ಪ್ರಕಾರ ಹುಟ್ಟಿದನು; ಸ್ವತಂತ್ರಳಿಂ
೨೪ ದಾದವನು [3]ವಾಗ್ದತ್ತದಿಂದಲೇ. ಇವು [4]ಅನ್ಯಾಭಿಪ್ರಾಯವಾಗಿವೆ; ಹ್ಯಾಗಂದರೆ ಅವರು ಎರಡು ಒಡಂಬ
ಡಿಕೆಗಳಾಗಿದ್ದಾರೆ, ಸೀನಾಯ ಪರ್ವತದಿಂದ ಬಂದು [5]ದಾಸತ್ವಕ್ಕಾಗಿ ಹೆರುವಂಥಾದ್ದು ಒಂದು; ಅದು
೨೫ ಹಾಗರಳೇ. ಹ್ಯಾಗಂದರೆ [6]ಹಾಗರ್ ಎಂಬುವದು, ಅರಾಬ್ಯದಲ್ಲಿರುವ ಸೀನಾಯ ಪರ್ವತವಾಗಿದೆ; ಅದು
೨೬ ಈಗಿನ ಯೆರೂಸಲೇಮಿಗೆ ಸರಿಯಾಗಿದೆ; ಅವಳು ತನ್ನ ಮಕ್ಕಳ ಸಂಗಡ ದಾಸಿಯಾಗಿದ್ದಾಳೆ. ಆದರೆ
೨೭ [7]ಮೇಲಿನ ಯೆರೂಸಲೇಮು ಸ್ವತಂತ್ರಳೇ; ಅವಳು ನಮ್ಮೆಲ್ಲರ ತಾಯಿ. ಯಾಕಂದರೆ ಹೆರದ ಬಂಜೆಯೇ,
ಆನಂದ ಪಡು, ಪ್ರಸವವೇದನೆ ಪಡದವಳೇ, ಶಬ್ದ ಎತ್ತಿ, ಕೂಗು; ಯಾಕಂದರೆ ಗಂಡನು ಉಂಟಾದವಳಿ
ಗಿಂತ [8]ಬಿಡಲ್ಪಟ್ಟವಳಿಗೆ ಮಕ್ಕಳು ಹೆಚ್ಚು, ಎಂದು (ಯೆಶಾ. ೫೪. ೧.) ಬರೆದದೆ.
೨೮, ೨೯ ನಾವಾದರೆ, ಸಹೋದರರೇ, ಇಸಾಕನ ಪ್ರಕಾರ [9]ವಾಗ್ದತ್ತದ ಮಕ್ಕಳಾಗಿದ್ದೇವೆ. ಆದರೆ ಹ್ಯಾಗೆ
ಆಗಲು ಮಾಂಸದ ಪ್ರಕಾರ ಹುಟ್ಟಿದವನು ಆತ್ಮದ ಪ್ರಕಾರ ಹುಟ್ಟಿದವನನ್ನು ಹಿಂಸಿಸಿದನೋ, ಹಾಗೆಯೇ
೩೦ [10]ಈಗಲೂ. ಆದರೂ ಬರಹವು ಏನು ಹೇಳುತ್ತದೆ? ದಾಸಿಯನ್ನೂ ಅವಳ ಮಗನನ್ನೂ [11]ಹೊರಗೆ ಹಾಕು;

1. ನ್ಯಾಯಪ್ರಮಾಣ ಅಂದರೆ, ಮೋಶೆಯ ಗ್ರಂಥಗಳು. ನ್ಯಾಯಪ್ರಮಾಣದಲ್ಲಿರುವ ಕಟ್ಟಳೆಗಳ ಹಾಗೆ ನಡೆಯುತ್ತೇವೆಂದು ಹೆಚ್ಚಳ ಪಟ್ಟ ಕಳ್ಳಬೋಧಕರಿಗೆ ಅದರಲ್ಲಿರುವ ಒಂದು ಚರಿತ್ರೆಯಲ್ಲಿ ಅಡಗಿರುವ ಜ್ಞಾನವನ್ನು ತಿಳಿಸುತ್ತಾನೆ. ಅಬ್ರಹಾಮನ ಇಬ್ಬರು ಕುಮಾರರ ಚರಿತ್ರೆಯಿಂದ ನ್ಯಾಯಪ್ರಮಾಣದ ದಾಸತ್ವವನ್ನೂ, ಸುವಾರ್ತಾಪ್ರಮಾಣದ ಸ್ವಾಧೀನದ ಮಹಿಮೆಯನ್ನೂ ತೋರಿಸುತ್ತಾನೆ. (೨೮—೩೧. ವ.) ಹೀಗೆ ಪೌಲನು ಶತ್ರುಗಳ ಆಯುಧದಿಂದಲೇ ಅವರನ್ನು ಜಯಿಸುತ್ತಾನೆ.

2. ಕಳ್ಳಬೋಧಕರು ತಮಗೆ ಆಧಾರ ಮಾಡಿ ಕೊಂಡಿದ್ದ ಮೋಶೆಯ ಪ್ರಮಾಣದಿಂದಲೇ, ಪೌಲನು ತಾನು ಹೇಳುವ ವಿಷಯವನ್ನು ದೃಷ್ಟಾಂತ ಪಡಿಸುತ್ತಾನೆ. (೨೧. ವ.) ಇಷ್ಮಯೇಲನು ಇಸಾಕನು ಎಂಬವರ ಚರಿತ್ರೆಯಿಂದ ನ್ಯಾಯಪ್ರಮಾಣಕ್ಕೆ ದಾಸರಾದವರು ಮೇಲಾದ ಭಾಗ್ಯವನ್ನು ಹೊಂದದೆ ತಳ್ಳಲ್ಪಡುವರೆಂದೂ, ಕ್ರಿಸ್ತನ ಶರಣಾಗತರು ದೇವರ ವಾಗ್ದತ್ತವನ್ನು ಹೊಂದಿ, ನಿತ್ಯ ಭಾಗ್ಯ ಹೊಂದುವರೆಂದೂ ಹೇಳುತ್ತಾನೆ. (೨೨—೩೧. ವ.)

3. ದಾಸಿಯಾದ ಹಾಗರಳಲ್ಲಿ ಹುಟ್ಟಿದ ಇಷ್ಮಯೇಲನು ಮಾಂಸದ ಪ್ರಕಾರ ಹುಟ್ಟಿದವನು. (ಉತ್ಪ. ೧೬. ೨.) ಸ್ವತಂತ್ರಯಜಮಾನಳಾದ ಸಾರಳಲ್ಲಿ ಹುಟ್ಟಿದ ಇಸಾಕನು ಅವಳ ವೃದ್ಧಾಪ್ಯದಲ್ಲಿ ಸರ್ವಶಕ್ತನಾದ ದೇವರ ವಾಗ್ದತ್ತದ ಪ್ರಕಾರ ಅದ್ಭುತವಾಗಿ ಹುಟ್ಟಿದವನು. (ರೋಮಾ. ೪. ೧೯—೨೧.)

4. ನೆಟ್ಟಗೆ ಕಾಣಿಸುವ ಈ ಚರಿತ್ರೆಯಲ್ಲಿ ಬೇರೆ ಅಭಿಪ್ರಾಯವು ಸಹ ಅಡಗಿ ಇದೆ. ಅಬ್ರಹಾಮನ ಇಬ್ಬರು ಹೆಂಡರು ಎರಡು ಒಡಂಬಡಿಕೆಗಳಿಗೂ, ಅವನ ಇಬ್ಬರು ಕುಮಾರರು ಆ ಒಡಂಬಡಿಕೆಗಳನ್ನು ಹೊಂದಿದ ಎರಡು ಜನಾಂಗಗಳಿಗೂ ಸಾಮ್ಯವಾಗಿದ್ದಾರೆ. ಪೌಲನು ವೇದಚರಿತ್ರೆಗೆ ಇಂಥಾ ಅನ್ಯಾಭಿಪ್ರಾಯ ಹೇಳುವದರಿಂದ, ವೇದವನ್ನೆಲ್ಲಾ ಹೀಗೆಯೇ ಅರ್ಥ ಮಾಡ ಬಹುದೆಂದು ಎಣಿಸ ಬಾರದು.

5. ನ್ಯಾಯಪ್ರಮಾಣಕ್ಕೊಳಗಾದವರು ದಾಸತ್ವದಲ್ಲಿ ಹುಟ್ಟಿದ ಮಕ್ಕಳ ಹಾಗಿದ್ದಾರೆ.

6. ಹಾಗರ್ ಎಂಬ ಹೆಸರು ಜ್ಞಾನಾರ್ಥವಾಗಿ ಸೀನಾಯ ಬೆಟ್ಟಕ್ಕೆ ಒಳಿಕೆಯಾಯಿತೆಂದು ಹೇಳ ಬಹುದು.

7. ಭೂಸಮ್ಮಂಧವಾದ ಕೆಳಗಿನ ಯೆರೂಸಲೇಮು ದಾಸತ್ವಕ್ಕೆ ತಕ್ಕ ಯೆಹೂದ್ಯ ಮತಕ್ಕೆ ಸಮಾನವಾಗಿದೆ. (೨೫. ವ.) ಹಾಗೆಯೇ ಪರಲೋಕದ ಮೇಲಾದ ಯೆರೂಸಲೇಮು, ಯೆಹೂದ್ಯರೂ ಜನಾಂಗಗಳವರೂ ಆದ ಕ್ರಿಸ್ತನ ದಾಸರೆಲ್ಲರಿಗೂ ಸ್ವತಂತ್ರವನ್ನು ಕೊಡುವ ಕ್ರಿಸ್ತನ ಮಾರ್ಗಕ್ಕೆ ಸಮಾನವಾಗಿದೆ.

8. ಗಂಡನುಳ್ಳ ಸ್ತ್ರೀ ಎಂಬುವದು ಯೆಹೂದ್ಯಸಭೆಯನ್ನೂ, ಬಿಡಲ್ಪಟ್ಟವಳೆಂಬುವದೂ ಬಂಜೆ ಎಂಬುವದೂ ಕ್ರಿಸ್ತಸಭೆಯನ್ನೂ ಸೂಚಿಸುತ್ತದೆ. ವೃದ್ಧಾಪ್ಯದ ಮಟ್ಟಿಗೂ ಬಂಜೆಯಾಗಿದ್ದ ಸಾರಳಿಗೆ ಉಂಟಾದ ಸಂತಾನವು ಆಕಾಶದ ನಕ್ಷತ್ರಗಳ ಹಾಗೆ ಅಭಿವೃದ್ಧಿಯಾದ ಪ್ರಕಾರ, ಕ್ರಿಸ್ತನ ಸಭೆಯು ಸಹ ಲೋಕದಲ್ಲೆಲ್ಲಾ ವ್ಯಾಪಿಸಿ ಬಾಳುವದು. ಇಂಥಾ ಅತಿಶಯ ಸಂಗತಿ ನಡಿಯುವದೆಂದು ಕ್ರಿಸ್ತನಿಗೆ ೭೬೦ ವರುಷಕ್ಕೆ ಮುಂಚಿದ್ದ ಯೆಶಾಯನು ಪ್ರವಾದಿಸಿದನು.

9. (೨೩ನೇ ವಚನದ ವ್ಯಾಖ್ಯಾನ ನೋಡ ಬೇಕು.) ಈ ವಾಗ್ದತ್ತವನ್ನೂ ಯೆಶಾ. ೫೩. ೧೦ಲ್ಲಿ ಮೆಸ್ಸೀಯನಾದ ಲೋಕರಕ್ಷಕನಿಗೆ ಮಾಡಲ್ಪಟ್ಟ ವಾಗ್ದತ್ತವನ್ನೂ ಸರಿ ನೋಡ ಬೇಕು.

10. ಇಷ್ಮಯೇಲನು ಇಸಾಕನನ್ನು ಹಾಸ್ಯ ಮಾಡಿದ್ದು ಸಹ ಒಂದು ಹಿಂಸೆಯೇ. ಹಿಂಸಿಸುವವರಿಗೆ ಹಾಸ್ಯವು ಸ್ವಾಭಾವಿಕವೇ. ಪೌಲನು ಈ ಪತ್ರಿಕೆಯನ್ನು ಬರೆದ ಕಾಲದಲ್ಲಿಯೂ ಕ್ರೈಸ್ತರಿಗೆ ಹಿಂಸೆ ಉಂಟಾಗಿತ್ತು. ಅದು ಮುಖ್ಯವಾಗಿ ಯೆಹೂದ್ಯರಿಂದಲೇ ಸಂಭವಿಸಿತು. (ಅಪೊ. ಕ್ರಿ. ೧೩. ೫೦; ೧೪. ೨, ೧೯; ೧೭. ೫. ೧ ಥೆಸ್ಸ. ೨. ೧೪—೧೬.)

11. ಇದರಿಂದ ಸಾರಳು ಹೇಳಿದ ಮಾತುಗಳನ್ನು ದೇವರು ಅಂಗೀಕರಿಸಿದನೆಂದು ತಿಳಿಯ ಬಹುದು. (ಉತ್ಪ. ೨೧. ೧೨.)



ಯಾಕಂದರೆ ದಾಸಿಯ ಮಗನು ಸ್ವತಂತ್ರಳ ಮಗನ ಸಂಗಡ ಬಾಧ್ಯನಾಗನು. (ಉತ್ಪ. ೨೧. ೧೦.)
೩೧ ಆದದರಿಂದ, ಸಹೋದರರೇ, [1]ದಾಸಿಗೆ ಅಲ್ಲ, ಸ್ವತಂತ್ರಳಿಗೆ ಮಕ್ಕಳಾಗಿದ್ದೇವೆ.

5. [2]ಹೀಗಿರುವದರಿಂದ ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದ [3]ಬಿಡುಗಡೆಯಲ್ಲಿ ನಿಂತು ಕೊಳ್ಳಿರಿ. ಮತ್ತು
[4]ತಿರಿಗಿ ದಾಸತ್ವದ ನೊಗಕ್ಕೆ ಒಳಗಾಗ ಬೇಡಿರಿ.

ಜನಾಂಗಗಳವರಾದ ಕ್ರೈಸ್ತರು ಪರಿಛೇದನೆ ಹೊಂದುವದು ಕ್ರಿಸ್ತನನ್ನು ಬಿಟ್ಟು ಬಿದ್ದು
ಹೋಗುವದಾಗಿದೆ ಎಂದು ತೋರಿಸಿದ್ದು.

೨ ಇಗೋ, ಪೌಲನಾದ ನಾನು ನಿಮಗೆ ಹೇಳುತ್ತೇನೆ—ಪರಿಛೇದನೆ ಹೊಂದಿದರೆ, [5]ಕ್ರಿಸ್ತನು ನಿಮಗೆ
೩ ಏನೂ ಪ್ರಯೋಜನವಾಗುವದಿಲ್ಲ. ಆದರೆ ಪರಿಛೇದನೆ ಹೊಂದುವ ಒಬ್ಬೊಬ್ಬ ಮನುಷ್ಯನಿಗೆ ನ್ಯಾಯಪ್ರ
೪ ಮಾಣವನ್ನೆಲ್ಲಾ ಮಾಡುವ ಹಂಗಿನಲ್ಲಿದ್ದಾನೆಂದು, ತಿರಿಗಿ ಸಾಕ್ಷಿ ಕೊಡುತ್ತೇನೆ. ನ್ಯಾಯಪ್ರಮಾಣದಿಂದ
೫ ನೀತಿನಿರ್ಣಯ ಪಡುವವರ್‍ಯಾರೋ, [6]ಕ್ರಿಸ್ತನಿಗೆ ಬೇರೆಯಾದಿರಿ; ಕೃಪೆಯಲ್ಲಿಂದ [7]ಬಿದ್ದು ಹೋದಿರಿ. ಯಾ
ಕಂದರೆ ನಾವು ಆತ್ಮದ ಮೂಲವಾಗಿ ವಿಶ್ವಾಸದಿಂದ ನೀತಿಯ ನಿರೀಕ್ಷೆಯನ್ನು ಎದುರು ನೋಡುತ್ತೇವೆ.
೬ ಹ್ಯಾಗಂದರೆ [8]ಕ್ರಿಸ್ತ ಯೇಸುವಿನಲ್ಲಿ ಪರಿಛೇದನೆಯಾದರೂ, ಅಪರಿಛೇದನೆಯಾದರೂ, ಏನೂ ಉಪಯೋಗಿ
ಸುವದಿಲ್ಲ; ಆದರೆ ಪ್ರೀತಿಯಿಂದ ಯತ್ನೈಸುವ ವಿಶ್ವಾಸವೇ.
೭, ೮ ಚನ್ನಾಗಿ ಓಡಿದಿರಿ; ಸತ್ಯಕ್ಕೆ ಸಮ್ಮತಿ ಪಡದ ಹಾಗೆ, ಯಾರು ನಿಮಗೆ ಅಡ್ಡ ಹಾಕಿದರು? [9]ಈ ಸಮ್ಮ

1. ನ್ಯಾಯಪ್ರಮಾಣಕ್ಕೊಳಗಾದವರು ದಾಸತ್ವದಲ್ಲಿದ್ದಾರೆ. ಸುವಾರ್ತೆಯ ಪ್ರಮಾಣಕ್ಕೊಳಗಾಗಿ ಕ್ರಿಸ್ತನನ್ನು ಹೊಂದಿದವರು ಪುತ್ರಸ್ವೀಕಾರವನ್ನೂ ಅದರ ನಿತ್ಯ ಸ್ವತಂತ್ರವನ್ನೂ ಹೊಂದುತ್ತಾರೆ.

2. ಗಲಾತ್ಯ ಸಭೆಯವರು ಯೆಹೂದ್ಯರ ಆಚಾರಕ್ರಮಗಳನ್ನು ಕೈಕೊಂಡು, ಕ್ರಿಸ್ತನಿಂದಾಗುವ ರಕ್ಷಣೆಯನ್ನು ಕಳಕೊಳ್ಳದಂತೆ, ಕ್ರಿಸ್ತಮಾರ್ಗದ ಸ್ವಾಧೀನವನ್ನು ಕಾಪಾಡಿ ಕೊಳ್ಳುವ ಹಾಗೆ ಪೌಲನು ಅವರಿಗೆ ಆಜ್ಞಾಪಿಸಿ, (೫. ೧—೬.) ಕಳ್ಳಬೋಧಕರಿಗೆ ದಂಡನೆ ಬರುವದೆಂದೂ, ಅವರನ್ನು ಬಿಟ್ಟು ತೊಲಗ ಬೇಕೆಂದೂ ಎಚ್ಚರಿಸಿ, (೭—೧೨. ವ.) ಕ್ರಿಸ್ತಮಾರ್ಗದ ಸ್ವಾಧೀನವಾದ ಶ್ಲಾಘ್ಯ ಹೊಂದಿದವರು ಪರಿಶುದ್ಧವಾಗಿಯೂ ಪ್ರೀತಿಯುಳ್ಳವರಾಗಿಯೂ ನಡೆದು ಕೊಳ್ಳ ಬೇಕೆಂದೂ, (೧೩—೧೫. ವ.) ದೇವರ ಕೃಪೆ ಹೊಂದದವರು ಹಾಗೆ ನಡಿಯಲಾರರೆಂದೂ, (೧೬—೨೬. ವ.) ಶಾಂತವೂ ದಯವೂ ಉಳ್ಳವರಾಗಿ ನಡಿಯುವದು ಕ್ರೈಸ್ತರ ಲಕ್ಷಣವೆಂದೂ, (೬. ೧—೬.) ಒಬ್ಬನು ತಾನು ಬಿತ್ತುವದನ್ನೇ ಕೊಯ್ಯುವನೆಂದೂ (೭—೧೦. ವ.) ಹೇಳುತ್ತಾನೆ.

3. ೪. ೯. ಅಪೊ. ಕ್ರಿ. ೧೫. ೧೦. ವಚನಗಳ ವ್ಯಾಖ್ಯಾನಗಳಲ್ಲಿ ನೋಡ ಬೇಕು.

4. ಕ್ರಿಸ್ತನು ನಮ್ಮನ್ನು ವಿಮೋಚಿಸಿರುವದರಿಂದಲೂ, (೩—೧೩. ವ.) ನಾವು ದೇವರ ವಾಗ್ದತ್ತವಾದ ಮೇಲಾದ ಭಾಗ್ಯವನ್ನು ಸ್ವತಂತ್ರಿಸಿ ಕೊಳ್ಳುವವರಾಗಿರುವದರಿಂದಲೂ, (೩. ೨೯.) ದೇವಾನುಗ್ರಹದಿಂದ ಲೋಕದ ಸಂಪ್ರದಾಯಗಳಿಗೆ ದೂರವಾದವರಾಗಿರುವದರಿಂದಲೂ (೪. ೯.) ಪರಮ ಯೆರೂಸಲೇಮಿನ ಮಕ್ಕಳಾಗಿರುವದರಿಂದಲೂ (೪. ೨೬—೩೧.) ಸ್ವತಂತ್ರ ಸ್ಥಿತಿಯಲ್ಲಿರ ತಕ್ಕವರೇ. ಕ್ರಿಸ್ತನ ಮಹಾ ಪುಣ್ಯದಿಂದ ಉಂಟಾದ ಈ ಶ್ರೇಷ್ಠ ಸ್ಥಿತಿಯನ್ನು ಕಳಕೊಳ್ಳುವದು ಎಷ್ಟೋ ದೌರ್ಭಾಗ್ಯವು. (ರೋಮಾ. ೬. ೧೬—೨೦. ವಚನಗಳ ವ್ಯಾಖ್ಯಾನ ನೋಡ ಬೇಕು.)

5. ಯೆಹೂದ್ಯ ಬೋಧಕರ ವಂಚನೆಗೊಳಪಟ್ಟು ರಕ್ಷಣೆ ಹೊಂದುವದಕ್ಕೆ ಪರಿಛೇದನೆ ಹೊಂದುವವರು ಒಬ್ಬನೇ ರಕ್ಷಕನಾಗಿರುವ ಕ್ರಿಸ್ತನನ್ನು ಉಪೇಕ್ಷಿಸಿ ತಳ್ಳುವವರಾಗಿದ್ದಾರೆ. ಅವರು ಪರಮ ಗತಿ ಹೊಂದುವದಕ್ಕೆ ನ್ಯಾಯಪ್ರಮಾಣವನ್ನು ಸಂಪೂರ್ಣವಾಗಿ ಕೈಕೊಳ್ಳ ಬೇಕಾಗುವದು. ಆದರೂ ಸ್ವಂತ ಪುಣ್ಯದಿಂದ ಪರಮ ಗತಿ ಹೊಂದುವದು ಅಸಾಧ್ಯವೇ.

6. ಕ್ರಿಸ್ತನ ಪುಣ್ಯವನ್ನು ನಂಬಿದವರು ಆತನನ್ನು ತಳ್ಳಿ ಬಿಟ್ಟು, ನ್ಯಾಯಪ್ರಮಾಣದ ಕ್ರಿಯೆಗಳಾದ ಸ್ವಪುಣ್ಯದಿಂದ ರಕ್ಷಣೆ ಹೊಂದುವದಕ್ಕೆ ಪ್ರಯತ್ನ ಮಾಡುವವರು ತಮ್ಮನ್ನು ಕ್ರಿಸ್ತನಿಗೆ ಅನ್ಯರಾಗ ಮಾಡುತ್ತಾರೆ.

7. ನ್ಯಾಯಪ್ರಮಾಣದ ಕ್ರಿಯೆಗಳಿಂದ ನೀತಿವಂತರಾಗ ಬೇಕೆಂಬುವವರು, ವಿಶ್ವಾಸದಿಂದ ಮಾತ್ರ ರಕ್ಷಣೆಯನ್ನು ಹೊಂದ ತಕ್ಕ ಮಾರ್ಗವನ್ನು ಬಿಟ್ಟು, ಕೃಪೆಯನ್ನು ಅಲಕ್ಷ್ಯ ಮಾಡಿ ಬಿದ್ದು ಹೋದವರಾಗಿದ್ದಾರೆ.

8. ಉತ್ತಮ ವಿಶ್ವಾಸದಿಂದ ಕ್ರಿಸ್ತನಲ್ಲಿ ಐಕ್ಯವಾಗಿರುವವರಿಗೆ ಪರಿಛೇದನೆ ಇದ್ದರೂ ಇಲ್ಲದಿದ್ದರೂ ಏನೂ ಇಲ್ಲ. ಪರಿಛೇದನೆಯಿಂದ ಅವರಿಗೆ ಪ್ರಯೋಜನವೂ ಇಲ್ಲ, ಅದು ಇಲ್ಲದಿದ್ದರೆ ನಷ್ಟವೂ ಇಲ್ಲ. ಪ್ರೀತಿಯಿಂದ ಕ್ರಿಯೆ ನಡಿಸುವ ವಿಶ್ವಾಸವೇ ಅವರಿಗೆ ದೊಡ್ಡ ಲಾಭವು.

9. ಈ ಸಮ್ಮತಿ ಎಂಬುವದು, ರಕ್ಷಣೆಗೆ ಪರಿಛೇದನೆ ಅವಶ್ಯವೆಂದು ಹೇಳಿದ ಕಳ್ಳಗುರುಗಳ ಬೋಧನೆಯನ್ನು ಕುರಿತದ್ದು. ನಿಮ್ಮನ್ನು ಕರೆದ ದೇವರ ಸತ್ಯಕ್ಕೆ ಒಳಪಟ್ಟು, ಆ ಮಾರ್ಗದಲ್ಲಿ ಚನ್ನಾಗಿ ಓಡಿದ ನೀವು ಫಕ್ಕನೆ ನಿಂತು ಹೋದದ್ದನ್ನು ನೋಡಿದರೆ, ಬೇರೊಬ್ಬರ ಬೋಧನೆಯಿಂದಲೇ ಹಾಗೆ ಮಾಡಿದಿರೆಂದೂ, ಹಾಗೆ ನಿಮಗೆ ಬೋಧಿಸಿದವರು ಸತ್ಯಕ್ಕೆ ದ್ರೋಹಿಗಳೆಂದೂ ನಿಶ್ಚಯವಾಗಿ ತೋರುತ್ತದೆ. ನಿಮ್ಮಲ್ಲಿ ಪ್ರಾರಂಭಿಸಿದ ಈ ಕೊಳ್ಳೆ ಜಾಡ್ಯವು ನಿವ

೯ ತಿಯು ನಿಮ್ಮನ್ನು ಕರೆದವನಿಂದ ಆದದ್ದಲ್ಲ. ಸ್ವಲ್ಪ ಹುಳಿಯು ಮುದ್ದೆಯನ್ನೆಲ್ಲಾ ಹುಳಿ ಮಾಡುತ್ತದೆ.
೧೦ ಯಾವದರಲ್ಲಾದರೂ ನಿಮಗೆ ಬೇರೆ ಮನಸ್ಸಾಗುವದಿಲ್ಲವೆಂದು, ನಾನು ಕರ್ತನಲ್ಲಿ ನಿಮ್ಮನ್ನು ಕುರಿತು
ಭರವಸವಾಗಿದ್ದೇನೆ; ಆದರೆ ನಿಮ್ಮನ್ನು ತೊಂದರೆ ಪಡಿಸುವವನು, ಯಾರಾಗಲಿ, ಆಜ್ಞೆಯನ್ನು ತಾಳುವನು.
೧೧ ನಾನಾದರೆ, ಸಹೋದರರೇ, ಇನ್ನು [1]ಪರಿಛೇದನೆಯನ್ನು ಸಾರಿದರೆ, ಇನ್ನು ಯಾಕೆ ಹಿಂಸೆ ಪಡುತ್ತೇನೆ?
೧೨ ಹಾಗಾದರೆ, ಶಿಲುಬೆಯ ಎಡತಡೆಯು ತೆಗೆದು ಹಾಕಲ್ಪಟ್ಟಿರುವದು. ನಿಮ್ಮನ್ನು ಗಲಿಬಿಲಿ ಮಾಡುವವರು
[2]ಕಡಿದು ಬಿಡಲ್ಪಟ್ಟರೆ, ವಾಸಿ.
೧೩ ಹ್ಯಾಗಂದರೆ, ಸಹೋದರರೇ, ನೀವು [3]ಬಿಡುಗಡೆಗಾಗಿ ಕರೆಯಲ್ಪಟ್ಟಿರಿ, ಮಾಂಸಕ್ಕೆ ಆಸ್ಪದ ಕೊಡುವ ಬಿಡುಗ
೧೪ ಡೆಯು ಮಾತ್ರ ಬೇಡ; ಆದರೆ ಪ್ರೀತಿಯಿಂದ ಒಬ್ಬರನ್ನೊಬ್ಬರು ಸೇವಿಸಿರಿ. ಯಾಕಂದರೆ ನಿನ್ನ ನೆರೆಯವ
ನನ್ನು ನಿನ್ನ ಹಾಗೆ ಪ್ರೀತಿ ಮಾಡು (ಲೇವಿಕ. ೧೯. ೧೮.) ಎಂಬ ಒಂದೇ ವಾಕ್ಯದಲ್ಲಿ ನ್ಯಾಯಪ್ರಮಾಣ
೧೫ ವೆಲ್ಲಾ ಪೂರ್ತಿಯಾಗುತ್ತದೆ. ಆದರೆ ಒಬ್ಬರನ್ನೊಬ್ಬರು ಕಚ್ಚಿ, ತಿಂದು ಬಿಟ್ಟರೆ, ಒಬ್ಬರಿಂದೊಬ್ಬರು ಲಯ
ವಾಗದ ಹಾಗೆ, ನೋಡಿ ಕೊಳ್ಳಿರಿ.
೧೬ ಇದನ್ನು ಹೇಳುತ್ತೇನೆ—[4]ಆತ್ಮದಲ್ಲಿ ನಡೆದು ಕೊಳ್ಳಿರಿ, ಆಗ ಮಾಂಸದ ಆಶೆಯನ್ನು ತೀರಿಸದೆ ಇರುವಿರಿ.
೧೭ ಯಾಕಂದರೆ ಮಾಂಸವು ಆತ್ಮಕ್ಕೆ ವಿರೋಧವಾಗಿಯೂ, ಆತ್ಮವು ಮಾಂಸಕ್ಕೆ ವಿರೋಧವಾಗಿಯೂ, ಆಶಿಸು
೧೮ ತ್ತದೆ; ನೀವು [5]ಇಚ್ಛೈಸುವವುಗಳನ್ನು ಮಾಡದ ಹಾಗೆ, ಅವು ಒಂದಕ್ಕೊಂದು ವಿರೋಧವಾಗಿವೆ. ಆದರೆ
ನೀವು ಆತ್ಮದಿಂದ ನಡಿಸಲ್ಪಟ್ಟರೆ, [6]ನ್ಯಾಯಪ್ರಮಾಣಕ್ಕೊಳಗಾಗಿರುವದಿಲ್ಲ.
೧೯ ಆದರೆ [7]ಮಾಂಸದ ಕ್ರಿಯೆಗಳು ಪ್ರಕಟವಾಗಿವೆ; ಯಾವವಂದರೆ, ವ್ಯಭಿಚಾರ, ಜಾರತ್ವ, ಅಶುದ್ಧತ್ವ, ಬಂಡು
೨೦ ತನ, ವಿಗ್ರಹಾರಾಧನೆ, [8]ಶೂನ್ಯ, ವಿರೋಧಗಳು, ಜಗಳಗಳು, ಹುರುಡುಗಳು, ಶಿಟ್ಟುಗಳು, ವಾಗ್ವಾದ

ರ್ತಿಯಾಗದಿದ್ದರೆ, ಏಕವಾಗಿ ಎಲ್ಲರನ್ನು ಹಿಡಿಯುವದು. (೯. ವ.) ಆದಾಗ್ಯೂ ನೀವು ಇನ್ನೂ ಸತ್ಯವನ್ನು ಅನುಸರಿಸಿ ನಡಿಯುವಿರೆಂದೂ, ನನ್ನ ವಿಷಯ ಕೆಟ್ಟದ್ದು ಹೇಳಿದ ಕಳ್ಳಬೋಧಕರಿಗೆ ದಂಡನೆ ಬರುವದೆಂದೂ ನಂಬುತ್ತೇನೆಂಬದಾಗಿ ಹೇಳುತ್ತಾನೆ. (೧೦—೧೨. ವ.)

1. ರಕ್ಷಿಸಲ್ಪಡುವದಕ್ಕೆ ಪರಿಛೇದನೆ ಹೊಂದುವದು ಅಗತ್ಯವೆಂದು ಪೌಲನು ಸಾರುತ್ತಾನೆಂದು ಶತ್ರುಗಳು ತಪ್ಪು ದೂರು ಹೇಳಿದರು. ಅವನು ಹೀಗೆ ಪರಿಛೇದನೆ ಪ್ರಸಂಗಿಸಿದ್ದರೆ, ಯೆಹೂದ್ಯರು ಅವನನ್ನು ಹಿಂಸಿಸಲಾರರು; ಶಿಲುಬೆಯ ಎಡತಡೆ ಸಹ ಇರಲಾರದು. ಆದರೆ ಯೆಹೂದ್ಯರು ಅವನನ್ನು ಹಿಂಸಿಸಿದ್ದರಿಂದ ಅವನು ಪರಿಛೇದನೆಯ ಪ್ರಸಂಗಿಯಾಗಿರದೆ, ಕ್ರಿಸ್ತನ ಶಿಲುಬೆಯ ಪ್ರಸಂಗಿಯಾಗಿದ್ದನೆಂಬುವದು ಪ್ರತ್ಯಕ್ಷವಾಗಿದೆ.

2. ಕಡಿದು ಬಿಡಲ್ಪಟ್ಟರೆ, ಎಂಬುವದಕ್ಕೆ ಮೂಲ ಭಾಷೆಯಲ್ಲಿ, ತಮ್ಮನ್ನು ಕಡಿದು ಕೊಂಡರೆ ವಾಸಿ ಎಂಬದಾಗಿ ಉಂಟು.

3. ಬಿಡುಗಡೆ ಅಂದರೆ, ಒಂದು ಕಟ್ಟಿಗೂ ಒಳಪಡದೆ ಮನಸ್ಸು ಬಂದ ಹಾಗೆ ನಡಿಯು ತಕ್ಕ ಸ್ವತಂತ್ರವಲ್ಲ. ನ್ಯಾಯಪ್ರಮಾಣದ ದಾಸತ್ವದಿಂದ ಬಿಡುಗಡೆಯಾದವರು, ಮೇಲಾದ ಪ್ರೀತಿಯ ಪ್ರಮಾಣಕ್ಕೆ ವಿಧೇಯರಾಗಿ ನಡಿಯ ತಕ್ಕದ್ದು. (ರೋಮಾ. ೮. ೧೨, ೧೩; ೧೩. ೮—೧೦.) ಸ್ವಾಧೀನನಾದ ಕ್ರಿಸ್ತಭಕ್ತನು ಅಡಕವಾಗಿ ನಡೆದು ತನ್ನ ಸಹೋದರನಿಗೆ ಸೇವೆ ಮಾಡುವವನಾಗಿದ್ದಾನೆ. ಪ್ರೀತಿಯುಳ್ಳವರಲ್ಲಿ ಕಲಹ ವ್ಯಾಜ್ಯಗಳು ಹುಟ್ಟಲಾರವು. ತನ್ನ ಹಾಗೆಯೇ ಪರನನ್ನು ಸ್ನೇಹಿಸುವವನು ಅವನನ್ನು ಕಚ್ಚಿ ಘಾಯ ಮಾಡದೆ ನೆಟ್ಟಗೆ ನಡಿಸುವನು. (ಎಫೆ. ೫. ೨೯.)

4. (ರೋಮಾ. ೮. ೪. ವಚನದ ವ್ಯಾಖ್ಯಾನ ನೋಡ ಬೇಕು.) ಆತ್ಮನ ವರವನ್ನು ಹೊಂದಿ, ಆತನ ಚಿತ್ತಕ್ಕೆ ಸರಿಯಾಗಿ ನಡಿಯುವವರೇ ಆತ್ಮನಲ್ಲಿ ನಡೆದು ಕೊಳ್ಳುವವರಾಗಿದ್ದಾರೆ. (೫. ವ.)

5. ಆತ್ಮದ ಆಶೆಯೂ ಮಾಂಸದ ಆಶೆಯೂ ಒಂದಕ್ಕೊಂದು ಭೇದವಾಗಿಯೂ, ಒಂದನ್ನು ಒಂದು ನಾಶ ಮಾಡುವದಾಗಿಯೂ ಇರುವದರಿಂದ, ನಾವು ಅಪೇಕ್ಷಿಸುವ ಒಳ್ಳೇ ಕಾರ್ಯಗಳನ್ನು ಮಾಡುವದಕ್ಕೆ ತಡೆಯುಂಟಾಗುತ್ತದೆ. (ದೇವರ ದಾಸರಲ್ಲಿ ನಡಿಯುವ ಈ ಹೋರಾಟವನ್ನು ಕುರಿತು ರೋಮಾ. ೭. ೧೪—೨೫. ವಚನಗಳ ವ್ಯಾಖ್ಯಾನ ನೋಡ ಬೇಕು.)

6. ಕೃಪೆಯ ಕೆಳಗಿರುವವರು ಮಾಂಸದ ಆಶೆಗೆ ಅಥವಾ ಪಾಪದ ಪ್ರಮಾಣಕ್ಕೆ ಒಳಗಾಗಿರುವದಿಲ್ಲ. ಪಾಪವೆಂಬ ಕ್ರೂರ ಅರಸನು ಅವರನ್ನು ಆಳುವದಿಲ್ಲ. (ರೋಮಾ. ೬. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ದಿವ್ಯ ಕೃಪೆ ಹೊಂದಿದವರು ನ್ಯಾಯಪ್ರಮಾಣದ ಈಡೇರಿಕೆಯಾದ ಆತ್ಮದ ಫಲಗಳನ್ನು ಕೊಡುವವರಾಗಿಯೂ, ಮಾಂಸದ ಆಶೆಗಳನ್ನು ಶಿಲುಬೆಗೆ ಹಾಕಿ ಕೊಲ್ಲುವವರಾಗಿಯೂ ಇರುವರು. (೨೩, ೨೪. ವ.) ದೇವಾತ್ಮನ ಅನುಗ್ರಹ ಹೊಂದಿ ಈ ಹೋರಾಟವನ್ನು ನಡಿಸುವವರಿಗೆ ಜಯ ಉಂಟಾಗುವದು ನಿಶ್ಚಯ.

7. ಇಲ್ಲಿ ಪಾಪವೆಂಬ ವಿಷದ ಗಿಡದಿಂದ ಹುಟ್ಟಿದ ಕೆಟ್ಟ ಫಲಗಳನ್ನೂ, ಪರಿಶುದ್ಧವೆಂಬ ಮರದಲ್ಲಿ ಬೆಳೆದ ಸತ್ಫಲಗಳನ್ನೂ ವಿವರವಾಗಿ ತೋರಿಸಿದ್ದಾನೆ.

8. ಶೂನ್ಯವನ್ನು ವಿಗ್ರಹಾರಾಧನೆಗೆ ಕೂಡಿಸಿರುವದರಿಂದ ಇದು ಮಹಾ ಕೆಟ್ಟ ಪಾಪವೆಂದು ತೋರುತ್ತದೆ. (ಅಪೊ. ಕ್ರಿ. ೧೯. ೧೯.) ಇಂಥಾ ಪಾಪಗಳನ್ನು ಆಶೆಯಿಂದ ನಡಿಸುವವರು ಮೋಕ್ಷಕ್ಕೆ ಎಂದಿಗೂ ಸೇರಲಾರರು.



೨೧ ಗಳು, ದ್ವೇಷಗಳು, ಮತಭೇದಗಳು, ಹೊಟ್ಟೆಕಿಚ್ಚುಗಳು, ಕೊಲೆಗಳು, ಅಮಲುಗಳು, ದುಂದೌತನಗಳು,
ಇವು ಮೊದಲಾದವುಗಳು. ಇಂಥವುಗಳನ್ನು ಮಾಡುವವರು ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದು
ವದಿಲ್ಲವೆಂದು, ಮುಂಚೆ ಹೇಳಿದ ಪ್ರಕಾರವೇ, ನಿಮಗೆ ಮುಂದಾಗಿ ಹೇಳುತ್ತೇನೆ.
೨೨ ಆದರೆ ಆತ್ಮದ ಫಲವು ಯಾವದಂದರೆ—[1]ಪ್ರೀತಿಯು, ಸಂತೋಷವು, ಸಮಾಧಾನವು, ದೀರ್ಘಶಾಂತಿಯು,
೨೩ ದಯವು, ಒಳ್ಳೇತನವು, [2]ವಿಶ್ವಾಸವು, ಸಾತ್ವಿಕತ್ವವು, ಮಿತಾನುಭವವು, [3]ಇಂಥವುಗಳಿಗೆ ವಿರೋಧವಾಗಿ
೨೪ ನ್ಯಾಯಪ್ರಮಾಣವು ಇಲ್ಲ. ಆದರೆ ಕ್ರಿಸ್ತನವರು ಮಾಂಸವನ್ನು, ಇಚ್ಛೆಗಳೂ ಆಶೆಗಳೂ ಸಹಿತವಾಗಿ,
೨೫, ೨೬ [4]ಶಿಲುಬೆಗೆ ಹಾಕಿ ಇದ್ದಾರೆ. ಆತ್ಮದಲ್ಲಿ [5]ಬದುಕಿದರೆ, ಆತ್ಮದಲ್ಲಿಯೂ ನಡೆದು ಕೊಳ್ಳುವ. ಡಾಂಭಿಕ
ರಾಗಿರದೆ, ಒಬ್ಬರಿಗೊಬ್ಬರು ಕೋಪವೆಬ್ಬಿಸದೆ, ಒಬ್ಬರ ಮೇಲೊಬ್ಬರು ಹೊಟ್ಟೆಕಿಚ್ಚು ಪಡದೆ ಇರೋಣ.

ಶಾಂತವೂ, ಸಹತಾಪವೂ, ಉದಾರತ್ವವೂ, ಪ್ರಯತ್ನವೂ ಮುಂತಾದವುಗಳನ್ನು ಕುರಿತ ಕಟ್ಟಳೆಗಳು.

6. ಸಹೋದರರೇ, ಮನುಷ್ಯನು ಒಂದು ತಪ್ಪಿನಲ್ಲಿ ಮೊದಲು [6]ಶಿಕ್ಕಿ ಕೊಂಡರೂ, ಆತ್ಮಭಾವದವರಾದ
ನೀವು ಅಂಥವನನ್ನು ಸಾತ್ವಿಕತ್ವದ ಆತ್ಮದಿಂದ ನೆಟ್ಟಗೆ ಮಾಡಿರಿ. ನೀನು ಶೋಧನೆ ಪಡದ ಹಾಗೆ, ನಿನ್ನನ್ನು
ನೋಡಿಕೋ.
೨, ೩ ಒಬ್ಬೊಬ್ಬರ ಹೊರೆಗಳನ್ನು ಹೊತ್ತು, ಹೀಗೆಯೇ [7]ಕ್ರಿಸ್ತನ ನ್ಯಾಯಪ್ರಮಾಣವನ್ನು ಪೂರೈಸಿರಿ. ಯಾ
ಕಂದರೆ ಒಬ್ಬನು, ಏನೂ ಇಲ್ಲದೆ, ತಾನು ಏನಾದರೂ ಇದ್ದೇನೆಂದು ನೆನಸಿದರೆ, ತನ್ನನ್ನು ಮೋಸಗೊಳಿಸು
೪ ತ್ತಾನೆ. ಆದರೆ ತನ್ನ ಕ್ರಿಯೆಯನ್ನು ಒಬ್ಬೊಬ್ಬನು ಪರೀಕ್ಷಿಸಲಿ; ಆಗ [8]ಬೇರೊಬ್ಬನಲ್ಲಿ ಅಲ್ಲ, ತನ್ನಲ್ಲಿ ಮಾತ್ರ
೫ ಹೆಚ್ಚಳವನ್ನು ಹೊಂದುವನು. ಯಾಕಂದರೆ ಒಬ್ಬೊಬ್ಬನು ಸ್ವಂತ ಹೊರೆಯನ್ನು ಹೊರುವನು.

1. ನವರತ್ನಖಚಿತವಾದ ಮಣಿಗಳೋಪಾದಿಯಾಗಿರುವ ಈ ಒಂಭತ್ತು ಗುಣಗಳಲ್ಲಿ ಪ್ರೀತಿಯೇ ಮುಖ್ಯವಾದದ್ದಾಗಿರುವದರಿಂದ ಅದನ್ನು ಮೊದಲನೇದಾಗಿ ಹೇಳಿದ್ದಾನೆ. (೧ ಕೊರಿ. ೧೩. ೧೩.)

2. ವಿಶ್ವಾಸವೆಂಬುವದು ಯಥಾರ್ಥತ್ವವನ್ನು (ತೀತ. ೨. ೧೦. ೧ ತಿಮೊ. ೬. ೧೧.) ಅಥವಾ ನಂಬಿಕೆಯನ್ನು ಸೂಚಿಸುತ್ತದೆ. (೧ ಕೊರಿ. ೧೩. ೭.)

3. ಈ ಸದ್ಗುಣಗಳು ದೇವಪ್ರಮಾಣಕ್ಕೆ ಹೊಂದಿದವುಗಳಾಗಿರುವದರಿಂದ ಅವುಗಳಿಗೆ ವಿರೋಧವಾದ ಪ್ರಮಾಣ ಒಂದೂ ಇಲ್ಲ. ಕ್ರೈಸ್ತರು ಈ ಗುಣಗಳುಳ್ಳವರಾಗಿ ನಡೆದರೆ, ಲೋಕಕ್ಕೆ ಎಷ್ಟೋ ಪ್ರಯೋಜನ! ಮತ್ತು ದೇವರಿಗೆ ಮಹಿಮೆ ಉಂಟಾಗುವದು.

4. (೨. ೨೦; ೬. ೧೪. ರೋಮಾ. ೮. ೧೩. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ಶಿಲುಬೆಗೆ ಹಾಕಲ್ಪಟ್ಟವರು ಕೆಲವು ದಿವಸ ವೇದನೆ ಪಟ್ಟು ಕಡೆಯಲ್ಲಿ ಸಾಯುವ ಪ್ರಕಾರ, ಭಕ್ತರಲ್ಲಿ ವಾಸವಾಗಿರುವ ಪಾಪವು ಸಹ ದಿನ ದಿನ ಬಲ ಕುಗ್ಗಿ ಕಡೆಯಲ್ಲಿ ನಾಶವಾಗುವದು.

5. ಪರಿಶುದ್ಧಾತ್ಮನಿಂದ ಆತ್ಮದ ಜೀವ ಹೊಂದಿದವರು ಆತನ ಆಳಿಕೆಗೆ ಒಳಪಟ್ಟು ನಡಿಯುವರು. ಅವರು ಸ್ವಂತ ಹೊಗಳಿಕೆ, ಗರ್ವ, ಹೊಟ್ಟೆಕಿಚ್ಚು ಮುಂತಾದ ಪಾಪಗಳಿಗೆ ಸ್ಥಳ ಕೊಡದೆ, ಪ್ರೀತಿಯ ಪ್ರಮಾಣಕ್ಕೆ ಒಳಪಟ್ಟು ನಡಿಯುವರು. ಪರಿಶುದ್ಧಾತ್ಮನ ಮಾರ್ಗದಲ್ಲಿ ಅವರು ಎಚ್ಚರಿಕೆಯಾಗಿ ನಡೆದು, ಆತನ ಕಟ್ಟಳೆಗಳಿಗೆ ವಿರೋಧವಾದ ದುರ್ಗುಣಗಳನ್ನು ಬಿಟ್ಟು, ಪ್ರೀತಿಯಲ್ಲಿ ಬದುಕಿ ದೇವರ ಪಾದ ಸೇರುವರು.

6. ತಪ್ಪಿನಲ್ಲಿ ಶಿಕ್ಕಿ ಕೊಳ್ಳುವದು ಎಂಬುವದಕ್ಕೆ ಮೂಲಭಾಷೆಯ ಅಭಿಪ್ರಾಯದ ಪ್ರಕಾರ, ಫಕ್ಕನೆ ಉಂಟಾಗುವ ಶೋಧನೆಯಲ್ಲಿ ಅಕಸ್ಮಿಕವಾಗಿ ಶಿಕ್ಕಿ ಕೊಳ್ಳುವದನ್ನು ಕುರಿತದ್ದು. ತಪ್ಪು ಎಂಬುವದು ನೆಟ್ಟಗಾದ ಹಾದಿಯನ್ನು ಬಿಟ್ಟು ತೊಲಗುವದು. ಇದು ಶೋಧಕನಾದ ಸೈತಾನನಿಂದ ಫಕ್ಕನೆ ಸಂಭವಿಸುವ ಶೋಧನೆಯು. ಒಬ್ಬನು ಪರಮ ಚಿಯೋನಿಗೆ ನೆಟ್ಟಗೆ ಹೋಗುವ ಮಾರ್ಗವನ್ನು ಬಿಟ್ಟು ತೊಲಗಿ ಅಪರಾಧಿಯಾದರೆ, ದೇವಾತ್ಮನಿಂದ ಆತ್ಮದ ಜೀವವನ್ನೂ ಪ್ರಕಾಶವನ್ನೂ ಹೊಂದಿದ ಭಕ್ತರು ತಮ್ಮ ಸ್ವಂತ ಬಲಹೀನತ್ವವನ್ನು ಗ್ರಹಿಸಿ ಕೊಂಡವರಾಗಿ, ಅವನ ಅಪರಾಧವನ್ನು ಅವನಿಗೆ ಪ್ರೀತಿಯಿಂದ ತೋರಿಸಿ, ಅವನನ್ನು ಸರಿಯಾದ ಹಾದಿಗೆ ತಿರುಗಿಸಿ ಗುಣ ಪಡುವ ಹಾಗೆ ಮಾಡ ಬೇಕು.

7. ಇದು ದಯಾನಿಧಿಯಾದ ಕ್ರಿಸ್ತನು ಕೊಟ್ಟ ಪ್ರೀತಿಯ ಪ್ರಮಾಣವು. (ಯೋಹಾ. ೧೩. ೩೪, ೩೫.) ಕ್ರಿಸ್ತನ ಲೇಸಾದ ನೊಗವನ್ನು ಹೊತ್ತು ಕೊಂಡಿರುವ ಪ್ರಿಯರು ಮತ್ತೊಬ್ಬರ ಭಾರಗಳನ್ನು ಉತ್ಸಾಹವಾಗಿ ಹೊತ್ತು ಕೊಳ್ಳುವರು.

8. ತನ್ನ ನೆರೆಯವನಿಗಿಂತ ತಾನು ಒಳ್ಳೆಯವನೆಂದು ಎಣಿಸಿ ಕೊಳ್ಳುವದು ಬಹುಶಾ ತಪ್ಪಾಗಿರುವದು. ಆದದರಿಂದ ಅದನ್ನು ಕುರಿತು ಹೆಚ್ಚಳ ಪಡುವದು ಸರಿಯಲ್ಲ. ಒಬ್ಬೊಬ್ಬನು ಹೊರತಕ್ಕ ಹೊರೆ ಇರುವದರಿಂದ ಅವನವನು ತನ್ನ ತನ್ನ ಕ್ರಿಯೆಗಳನ್ನು ಪರೀಕ್ಷಿಸಿ ನೋಡಿ ಕೊಂಡರೆ, ಗರ್ವದ ಯೋಚನೆಗೆ ಸ್ಥಳ ಕೊಡದೆ ಮತ್ತೊಬ್ಬರನ್ನು ಕರುಣಿಸುವನು. ಪ್ರೀತಿಯ ಪ್ರಮಾಣವನ್ನು ಅನುಸರಿಸದೆ, ಮತ್ತೊಬ್ಬರ ಅಪರಾಧಗಳನ್ನು ಮನ್ನಿಸದೆ ಇರುವದಕ್ಕೆ ಗರ್ವವೇ ಕಾರಣವು.

೬ ಆದರೆ ವಾಕ್ಯದ ಉಪದೇಶ ಹೊಂದುವವನು ಉಪದೇಶಿಸುವವನಿಗೆ [1]ಎಲ್ಲಾ ಒಳ್ಳೆಯವುಗಳಲ್ಲಿ ಪಾಲು ಕೊ
೭ ಡಲಿ. ತಪ್ಪಿ ಹೋಗ ಬೇಡಿರಿ; ದೇವರು [2]ಹಾಸ್ಯ ಮಾಡಲ್ಪಡುವವನಲ್ಲ; ಯಾಕಂದರೆ ಮನುಷ್ಯನು ಯಾ
೮ ವದನ್ನು ಬಿತ್ತುವನೋ, ಅದನ್ನೇ ಕೊಯ್ಯುವನು. ಏನಂದರೆ ತನ್ನ ಮಾಂಸಕ್ಕೆ ಬಿತ್ತುವವನು ಮಾಂಸದಿಂದ
ಕೊಳೆಯುವಿಕೆಯನ್ನು ಕೊಯ್ಯುವನು; ಆದರೆ ಆತ್ಮಕ್ಕೆ ಬಿತ್ತುವವನು ಆತ್ಮದಿಂದ ನಿತ್ಯಜೀವವನ್ನು ಕೊಯ್ಯು
೯ ವನು. ದಣಿಯದೆ ಒಳ್ಳೇದನ್ನು ಮಾಡೋಣ; ಯಾಕಂದರೆ ಆಯಾಸ ಪಡದಿದ್ದರೆ, ತಕ್ಕ ಕಾಲದಲ್ಲಿ ಕೊ
೧೦ ಯ್ಯುವೆವು. ಹಾಗಾದರೆ, ನಮಗೆ [3]ಸಮಯವಿರುವ ಪ್ರಕಾರ ಎಲ್ಲರಿಗೆ, ಮುಖ್ಯವಾಗಿ ವಿಶ್ವಾಸದ ಮನೆತ
ನದವರಿಗೆ, ಒಳ್ಳೇದನ್ನು ಮಾಡೋಣ.

## ಅಂತ್ಯೋಕ್ತಿಯ ಬುದ್ಧಿಮತಿಗಳು.

೧೧, ೧೨ [4]ಎಂಥ ಅಕ್ಷರಗಳಿಂದ [5]ಸ್ವಂತ ಕೈಯಿಂದ ನಿಮಗೆ ಬರೆದಿದ್ಧೇನೆ, ನೋಡಿರಿ. ಮಾಂಸದಲ್ಲಿ ಸಮ್ಮುಖ
ತೋರಿಸ ಮನಸ್ಸುಳ್ಳವರಷ್ಟು ತಾವು ಕ್ರಿಸ್ತನ ಶಿಲುಬೆಗೋಸ್ಕರ ಹಿಂಸೆ ಪಡದ ಹಾಗೆ ಮಾತ್ರ, ಪರಿಛೇದನೆ
೧೩ ಹೊಂದ ನಿಮಗೆ [6]ಅಗತ್ಯ ಮಾಡುತ್ತಾರೆ. ಹ್ಯಾಗಂದರೆ ಪರಿಛೇದನೆ ಹೊಂದುವವರು ತಾವೇ ನ್ಯಾಯಪ್ರ
ಮಾಣವನ್ನು ಕೈಕೊಳ್ಳುವದಿಲ್ಲ; ನಿಮ್ಮ ಮಾಂಸದಲ್ಲಿ ಹೆಚ್ಚಳ ಪಡ ಬೇಕೆಂದು, ನೀವು ಪರಿಛೇದನೆ ಹೊಂದ

1. ಎಲ್ಲಾ ಒಳ್ಳೆಯವುಗಳೆಂಬುವದು ಜೀವನಾರ್ಥಕ್ಕೆ ಬೇಕಾದವುಗಳನ್ನು ಸೂಚಿಸುತ್ತದೆ. (೧ ಕೊರಿ. ೯. ೧೦, ೧೧.) ಹೊರತಕ್ಕ ಭಾರವು ಒಬ್ಬೊಬ್ಬನಿಗೂ ಇರುವ ಪ್ರಕಾರ, ದೇವರ ವಾಕ್ಯವನ್ನು ಪ್ರಸಂಗಿಸುವ ಬೋಧಕರಿಗೂ ಇರುತ್ತದೆ. ಆದದರಿಂದ ಬೇರೆ ಚಿಂತೆಗಳ ಸಂಗಡ ತಮ್ಮ ಜೀವನಕ್ಕೆ ಬೇಕಾದವುಗಳಿಗೋಸ್ಕರವೂ ಚಿಂತೆ ಪಡ ಬೇಕಾದರೆ, ಅವರ ಮೇಲೆ ಎರಡಷ್ಟು ಭಾರ ಹೊರಿಸಿದ ಹಾಗಾಗುವದು. ಆದದರಿಂದ ಅವರಿಂದ ಬೋಧನೆ ಹೊಂದುವ ಸಭೆಯವರು ಆ ಭಾರವನ್ನು ತಾವು ಸಹಿಸಿ ಕೊಳ್ಳ ಬೇಕು.

2. ಯಾವದು ತಪ್ಪಿದರೂ ದೇವರ ನಿರ್ಣಯವು ತಪ್ಪ ಕೂಡದು. ಆ ನಿರ್ಣಯದ ಪ್ರಕಾರ ಒಂದೊಂದು ಕ್ರಿಯಕ್ಕೂ ತಕ್ಕ ಫಲವು ಅಗತ್ಯವಾಗಿ ಬರುವದು. ಗೋಧಿಯನ್ನು ಬಿತ್ತುವವನು ಗೋಧಿಯನ್ನೂ, ಸಾಮೆಯನ್ನು ಬಿತ್ತುವವನು ಸಾಮೆಯನ್ನೂ ಕೊಯ್ಯುವ ಪ್ರಕಾರ, ಮಾಂಸದ ಚಿಂತೆಯಾದ ಜನ್ಮಸ್ವಭಾವದ ಪ್ರಕಾರ ನಡಿಯುವವನಿಗೆ ಅಪಕೀರ್ತಿಯೂ ನಾಶನವೂ ಬರುವದು. ಆದರೆ ಪರಿಶುದ್ಧಾತ್ಮನ ಸಹಾಯವನ್ನು ಹೊಂದಿ ದೇವರ ಕಟ್ಟಳೆಗಳಿಗೆ ಅನುಸಾರವಾಗಿ ನಡಿಯುವವನಿಗೆ ಪರಮ ಪದವಿಯೂ ಶಾಶ್ವತ ಜೀವವೂ ಉಂಟಾಗುವದು.

3. ಒಬ್ಬನಿಗೆ ದೊರಕುವ ಒಂದೊಂದು ಸಮಯವೂ ಅವನು ಮಾಡ ಬೇಕಾದ ಹಂಗನ್ನು ತೋರಿಸುವದಾಗಿದೆ. ಬಿತ್ತುವ ಸಮಯವೂ ಉಂಟು; ಕೊಯ್ಯುವ ಸಮಯವೂ ಉಂಟು. ಬಿತ್ತುವ ಕಾಲದ ಹಾಗಿರುವ ಈ ಜೀವಕಾಲದಲ್ಲಿ ನಾವು ನಮ್ಮ ಕರ್ತನ ಹಾಗೆ ಪರೋಪಕಾರಚಿಂತೆಯುಳ್ಳವರಾಗಿ ಎಲ್ಲರಿಗೂ, ವಿಶೇಷವಾಗಿ ವಿಶ್ವಾಸದ ಮನೆತನದವರಾದ ದೇವರ ದಾಸರಿಗೂ ಮೇಲು ಮಾಡುವವರಾಗಿದ್ದರೆ, ಕೊಯ್ಯುವ ಕಾಲವಾದ ನ್ಯಾಯತೀರ್ವಿಕೆಯ ದಿವಸದಲ್ಲಿ ಅದಕ್ಕೆ ತಕ್ಕ ಸುಫಲ ದೊರಕುವದೆಂದು ನಿಶ್ಚಯಿಸಿ ಒಳ್ಳೇದು ಮಾಡುವದರಲ್ಲಿ ಆಯಾಸ ಪಡದೆ ಇರೋಣ.

4. ಇದಕ್ಕೆ ಮೂಲಭಾಷೆಯಲ್ಲಿ, ಎಷ್ಟು ದೊಡ್ಡ ಅಕ್ಷರಗಳಿಂದ ಬರೆದೆನು ಎಂಬದಾಗಿ ಉಂಟು. ಪೌಲನು ತನ್ನ ಪತ್ರಿಕೆಗಳನ್ನು ಮತ್ತೊಬ್ಬರಿಂದ ಬರೆಸುವದೂ, ಕಡೆಯಲ್ಲಿ ತನ್ನ ಹೆಸರನ್ನೂ ಆಶೀರ್ವಾದವನ್ನೂ ತನ್ನ ಸ್ವಹಸ್ತದಿಂದ ಬರೆಯುವದೂ ವಾಡಿಕೆಯಾಗಿತ್ತು. (ರೋಮಾ. ೧೬. ೨೨. ವಚನದ ವ್ಯಾಖ್ಯಾನ ನೋಡ ಬೇಕು.) ಈ ಪತ್ರಿಕೆಯಲ್ಲಿ ಮುಖ್ಯ ವಿಷಯಗಳು ಅಡಗಿರುವ ಈ ಕಡೇ ವಚನಗಳನ್ನು ಮಾತ್ರ ಪೌಲನು ತನ್ನ ಸ್ವಹಸ್ತದಿಂದ ಎಲ್ಲರೂ ಓದುವಂತೆ ದೊಡ್ಡ ಅಕ್ಷರಗಳಿಂದ ಬರೆದನೆಂದು ಕೆಲವರು ನೆನಸುತ್ತಾರೆ. ಆದರೆ ಅದನ್ನು ನಿಶ್ಚಯಿಸಿ ಹೇಳ ಕೂಡದು. ಅವನು ಈ ಪತ್ರಿಕೆಯನ್ನೆಲ್ಲಾ ತನ್ನ ಸ್ವಹಸ್ತದಿಂದ ಬರೆದಿದ್ದರೆ, ಅದರಿಂದ ಪೌಲನಿಗೆ ಗಲಾತ್ಯ ಸಭೆಯವರ ಮೇಲೆ ಇದ್ದ ಪ್ರೀತಿಯೂ, ಈ ಪತ್ರಿಕೆಯ ಮುಖ್ಯ ವಿಷಯಗಳನ್ನು ಕುರಿತು ಅವನಿಗುಂಟಾಗಿದ್ದ ಮುಖ್ಯ ತಾತ್ಪರ್ಯವೂ ಚನ್ನಾಗಿ ತೋರುತ್ತದೆ.

5. ಈ ಪತ್ರಿಕೆಯ ಅಂತ್ಯೋಕ್ತಿಯಲ್ಲಿ ಪೌಲನು ತನ್ನ ಕೈಯಿಂದ ಬರೆದೆನೆಂದು ಅವರಿಗೆ ತಿಳಿಸಿ, (೧೧. ವ.) ಕಳ್ಳಬೋಧಕರಿಗೆ ತೊಲಗುವ ಹಾಗೆ ಅವರನ್ನು ಎಚ್ಚರಿಸಿ, (೧೨, ೧೩. ವ.) ತನ್ನ ಕರ್ತನಾದ ಕ್ರಿಸ್ತನ ಮೇಲೆ ತನಗೆ ಉಂಟಾಗಿರುವ ಭಕ್ತಿವೈರಾಗ್ಯವನ್ನೂ, ಆತನನ್ನು ಯಥಾರ್ಥವಾಗಿ ಪ್ರೀತಿ ಮಾಡುವ ಉತ್ತಮರ ಮೇಲೆ ತನಗಿರುವ ಪ್ರೀತಿಯನ್ನೂ ತಿಳಿಸಿ, (೧೪—೧೭. ವ.) ಆಶೀರ್ವಾದದೊಡನೆ ಪತ್ರಿಕೆಯನ್ನು ಮುಗಿಸುತ್ತಾನೆ. (೧೮. ವ.)

6. ಶಿಲುಬೆಯ ವಿಷಯವಾದ ಎಡತಡೆಗೂ ಉಪದ್ರಕ್ಕೂ ತಪ್ಪಿಸಿ ಕೊಳ್ಳುವ ಉದ್ದಿಶ್ಯ, ಕಳ್ಳಬೋಧಕರು ಪರಿಛೇದನೆ ಹೊಂದುವ ಹಾಗೆ ಮತ್ತೊಬ್ಬರನ್ನು ಬಲಾತ್ಕಾರ ಮಾಡಿದರೆ ಹೊರ್ತು, ನ್ಯಾಯಪ್ರಮಾಣವನ್ನು ಕೈಕೊಳ್ಳ ಬೇಕೆಂಬ ಮನಸ್ಸಿನಿಂದ ಅಲ್ಲವೆಂಬುವದು ೧೩ನೇ ವಚನದಿಂದ ತೋರುತ್ತದೆ. ತಮ್ಮಿಂದ ಅನೇಕರು ಪರಿಛೇದನೆ ಹೊಂದಿದರೆಂಬುವ ಹೆಚ್ಚಳವೇ ಅವರ ಮುಖ್ಯ ಗುರಿಯಾಗಿತ್ತು.



೧೪ ಇಚ್ಛೈಸುತ್ತಾರೆ. ಆದರೆ ನನಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ [1]ಶಿಲುಬೆಯಲ್ಲಿ ಹೊರ್ತು ಹೆಚ್ಚಳ ಪಡು
೧೫ ವದು ಆಗದು; [2]ಅದರಿಂದ ನನಗೆ ಲೋಕವು ಶಿಲುಬೆಗೆ ಹಾಕಲ್ಪಟ್ಟದೆ; ನಾನು ಲೋಕಕ್ಕೆ. ಯಾಕಂದರೆ
ಕ್ರಿಸ್ತ ಯೇಸುವಿನಲ್ಲಿ ಪರಿಛೇದನೆಯಾದರೂ, ಅಪರಿಛೇದನೆಯಾದರೂ, ಏನೂ ಉಪಯೋಗಿಸುವದಿಲ್ಲ;
೧೬ ಆದರೆ [3]ಹೊಸ ಸೃಷ್ಟಿಯೇ. [4]ಈ ಕಟ್ಟಳೆಯಿಂದ ನಡೆದು ಕೊಳ್ಳುವವರ್ಯಾರೋ, ಅವರ ಮೇಲೆಯೂ, ದೇ
ವರ ಇಸ್ರಯೇಲಿನ ಮೇಲೆಯೂ ಸಮಾಧಾನವೂ ಕರುಣೆಯೂ ಇರಲಿ.
೧೭ ಇನ್ನು ಮೇಲೆ ಯಾವನಾದರೂ ನನಗೆ ತೊಂದರೆ ಪಡಿಸದಿರಲಿ; ಯಾಕಂದರೆ ಕರ್ತನಾದ ಯೇಸುವಿನ
೧೮ [5]ಗುರುತುಗಳನ್ನು ನನ್ನ ಶರೀರದಲ್ಲಿ ಹೊರುತ್ತೇನೆ. ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ
ಕೃಪೆಯು ನಿಮ್ಮ ಆತ್ಮದ ಸಂಗಡ ಇರಲಿ. ಆಮೆನ್.

1. ಅಸತ್ಯಬೋಧಕರು ಪರಿಛೇದನೆಯಲ್ಲಿ ಹೆಚ್ಚಳ ಪಡುವಾಗ, ಸತ್ಯಬೋಧಕನಾದ ಪೌಲನು ಶಿಲುಬೆಯಲ್ಲಿಯೇ ಹೆಚ್ಚಳ ಪಡುತ್ತಾನೆ. ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿದ ಯೇಸು ಕ್ರಿಸ್ತನ ಪುಣ್ಯದಿಂದ ಹೊಸ ಸೃಷ್ಟಿಯಾದ ಪೌಲನು ಲೋಕವನ್ನು ಅಸಡ್ಡೆ ಮಾಡಿ, ಸಕಲವನ್ನೂ ಕಸವೆಂದೆಣಿಸಿ, ದೇವರಾದ ಯೇಸು ರಕ್ಷಕನನ್ನು ಕುರಿತು ಸದಾಕಾಲಗಳಲ್ಲಿಯೂ ಹೆಚ್ಚಳ ಪಡುತ್ತಾನೆ.

2. ಅದರಿಂದ ಅಂದರೆ, ಶಿಲುಬೆಯಿಂದ, ಅಥವಾ ಕ್ರಿಸ್ತನಿಂದ ಎಂಬ ಅರ್ಥವಾಗುತ್ತದೆ. ಸತ್ತ ಹೆಣಕ್ಕೆ ಲೋಕದ ಗೊಡವೆ ಏನೂ ಇಲ್ಲದಿರುವ ಪ್ರಕಾರ, ತನ್ನ ಪಾಪದಿಚ್ಛೆಗಳನ್ನು ಶಿಲುಬೆಗೆ ಹಾಕಿದ ಭಕ್ತನಿಗೆ ಲೋಕದ ಗೊಡವೆ ಏನೂ ಇರಲಾರದು. ಲೋಕವು ಸಹ ಅವನನ್ನು ಹಗೆ ಮಾಡುವದೇ ಹೊರ್ತು ಮೆಚ್ಚಲಾರದು.

3. ಈ ವಚನವು ಸತ್ಯವೇದದ ಸಾರವಾಗಿದೆ. ನಿಜವಾದ ದೇವಭಕ್ತಿಯು, ಪರಿಛೇದನೆ ಅಪರಿಛೇದನೆ ಎಂಬ ಹೊರಗಿನ ಆಚಾರಗಳಿಗೆ ಸಮ್ಮಂಥ ಪಟ್ಟದ್ದಾಗಿರದೆ, ಅಂತರ್ಯದಲ್ಲಿ ಜನ್ಮಿಸಿ ಪ್ರಕಟವಾಗುವ ದೇವರ ಹೋಲ್ವಿಕೆಗೆ ಸಮ್ಮಂಥ ಪಟ್ಟದ್ದಾಗಿದೆ. (೨ ಕೊರಿ. ೫. ೧೭. ವಚನದ ವ್ಯಾಖ್ಯಾನ ನೋಡ ಬೇಕು.)

4. ಪರಿಛೇದನೆಯವರಾದರೂ ಅಪರಿಛೇದನೆಯವರಾದರೂ ಪರಿಶುದ್ಧಾತ್ಮನ ಕೃಪೆಯಿಂದ ಹೊಸ ಸೃಷ್ಟಿಗಳಾದವರೆಲ್ಲರೂ ದೇವರ ಇಸ್ರಯೇಲ್ಯರಾಗಿ ನಿಜ ಭಕ್ತರಾಗಿ ದೇವರ ಶ್ರೇಷ್ಠ ಆಶೀರ್ವಾದವನ್ನು ಹೊಂದುವರು. (೩. ೨೯. ರೋಮಾ. ೯. ೭, ೮.)

5. ಯಜಮಾನನ ಗುರುತನ್ನು ದಾಸನಿಗೆ ಇಡುವದು ವಾಡಿಕೆಯಾಗಿತ್ತು. ಅದೇ ಪ್ರಕಾರ ಪರಮ ಯಜಮಾನನಾದ ಕ್ರಿಸ್ತನ ಗುರುತನ್ನು ಪೌಲನು ಧರಿಸಿ ಕೊಂಡಿದ್ದನು. ಆತನ ದಿವ್ಯ ಸೇವೆ ಮಾಡುವದರಲ್ಲಿ ಪೌಲನಿಗೆ ಅನೇಕ ದೆಬ್ಬೆಗಳೂ ಘಾಯಗಳೂ ಉಂಟಾಗಿದ್ದವು. (೨ ಕೊರಿ. ೧೧. ೨೪, ೨೫.) ಸತ್ಯವಿರೋಧಿಗಳಾದ ಶತ್ರುಗಳು ಪರಿಛೇದನೆಯ ಗುರುತನ್ನು ಕುರಿತು ಹೆಚ್ಚಳ ಪಟ್ಟರು. (೧೩. ವ.) ಉತ್ತಮ ದಾಸನಾದ ಪೌಲನು ಕ್ರಿಸ್ತನ ಗುರುತುಗಳನ್ನು ಕುರಿತೇ ಹೆಚ್ಚಳ ಪಟ್ಟನು. ಯುದ್ಧದಲ್ಲಿ ಘಾಯ ಪಟ್ಟ ವೀರನು ತನ್ನ ಅರಸನ ಸೇವೆಯಲ್ಲಿ ತನಗುಂಟಾದ ಘಾಯಗಳನ್ನು ಹೆಚ್ಚಳವಾಗಿ ತೋರಿಸುವ ಪ್ರಕಾರ, ಪರಮ ಅರಸನ ಪರಿಶುದ್ಧ ಸೇವೆಯಲ್ಲಿ ತನಗುಂಟಾದ ಘಾಯಗಳನ್ನು ಪೌಲನು ತೋರಿಸಿ, ಇನ್ನು ಮೇಲೆ ನನ್ನನ್ನು ಉಪದ್ರ ಪಡಿಸ ಬೇಡಿರಿ ಎಂದು ಬೇಡಿ, ಅವರಿಗೆ ದೇವರ ಆಶೀರ್ವಾದವನ್ನು ಹೇಳುತ್ತಾನೆ.